# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 269 Issue: 269 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 02.05.2025 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2





1,25,000+
Digital E-PAPER READERS
To book Classified Display Ad in HAMPI TIMES
Please call on
9448633038


No.1 HAMPI TIMES LEADING PRINT & DIGITAL District News Paper


**ನಿನಗೆ ನೀನೇ ಬೆಳಕು**

ಮೊದಲು ನಿಮ್ಮನ್ನು ನೀವು ಜಯಿಸಿ, ಆಗ ಇಡೀ ಜಗತ್ತೇ ನಿಮ್ಮದಾಗುತ್ತದೆ.

– ಸ್ವಾಮಿ ವಿವೇಕಾನಂದ

**ಆನಂದ ಬಾಣ**





**Call Us for Advertisements**
Good Opportunity for Branding

ನಿಮ್ಮೂರ ಜಾತ್ರೆ ಉತ್ಸವಕ್ಕೆ ಶುಭಾಶಯ, ಸಾಧಕರಿಗೆ/ ವಿದ್ಯಾರ್ಥಿಗಳಿಗೆ ಅಭಿನಂದನೆ ಕೋರಲು ಇಚ್ಛಿಸುವವರು

M:9448633038

ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


# ಜಾತಿಗಣತಿಯೊಂದಿಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆಯೂ ನಡೆಯಬೇಕು

## ಸಿಎಂ ಸಿದ್ದರಾಮಯ್ಯ ಆಗ್ರಹ | ಜನಸಂಖ್ಯೆಗನುಗುಣವಾಗಿ ಮೀಸಲಾತಿ ಕಲ್ಪಿಸಿ



■ **ಹಂಪಿ ಟೈಮ್ಸ್ ಬೆಂಗಳೂರು**

ಜನಗಣತಿಯೊಂದಿಗೆ ಜಾತಿಗಣತಿ ಮಾಡುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುತ್ತೇವೆ. ಅದರೊಂದಿಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆಯೂ ನಡೆಯಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ಗುರುವಾರ ಕಾವೇರಿ ನಿವಾಸದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು. ದೇಶದ ಜನತೆಗೆ ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಜಾತಿ ಗಣತಿ ಯೊಂದಿಗೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಬೇಕು. ಮೀಸಲಾತಿಯಲ್ಲಿ ಶೇ.50% ಗರಿಷ್ಠ ಪರಿಮಿತಿಯನ್ನು ಸಡಿಲಗೊಳಿಸಿ ಜನಸಂಖ್ಯೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು. ಜಾತಿ ಗಣತಿಗೆ ಕೂಡಲೇ ದಿನಾಂಕ ನಿಗದಿಗೊಳಿಸಬೇಕು ಎಂದರು.

ರಾಹುಲ್ ಗಾಂಧಿಯವರು ಕೂಡಾ ಇದನ್ನೇ ಆಗ್ರಹಿಸಿದ್ದು, ಜಾತಿ ಗಣತಿ ವೇಳೆ ಸಾಮಾಜಿಕ, ಆರ್ಥಿಕ ಸಮೀಕ್ಷೆ ನಡೆಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು. ಬಡವರು, ಹಿಂದುಳಿದವರನ್ನು ಮುಖ್ಯವಾಹಿನಿಗೆ ತರಲು ಅನುಕೂಲ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಬೇಕೆಂದು ಸಂವಿಧಾನ ಹೇಳುತ್ತದೆ. ಜಾತಿ ಗಣತಿ ಯೊಂದಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮಾಡಿದರೆ ಜನಸಂಖ್ಯೆಗನುಗುಣವಾಗಿ ಮೀಸಲಾತಿ ನೀಡಲು ಅನುಕೂಲವಾಗುತ್ತದೆ ಮತ್ತು ಅವರನ್ನು ಮುಖ್ಯವಾಹಿನಿಗೆ ತರಲು ಸಾಧ್ಯವಾಗುತ್ತದೆ ಎಂದರು.

**ಬಿಹಾರ ಚುನಾವಣೆ ಹಿನ್ನೆಲೆಯಲ್ಲಿ ಸಮೀಕ್ಷೆ:** ಈ ರೀತಿಯ 2015 ರಲ್ಲಿಯೇ ನಮ್ಮ ಸರ್ಕಾರ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮೂಲಕ 192 ಕೋಟಿ ವೆಚ್ಚ ಮಾಡಿ 1. 33 ಲಕ್ಷ ಸಿಬ್ಬಂದಿ ನಿಯೋಜನೆ ಮಾಡಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಲಾಗಿದೆ. ಇದರಿಂದ ಪ್ರೇರಿತವಾಗಿ ಮತ್ತು ಬಿಹಾರ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು ಈಗ ಸಮೀಕ್ಷೆಗೆ ಮುಂದಾಗಿದೆ ಎಂದರು.

**ಮೇ 9 ಕ್ಕೆ ಸಚಿವ ಸಂಪುಟ ಸಭೆ:** ಪ್ರಸಕ್ತ ಸಚಿವ ಸಂಪುಟದಲ್ಲಿ ಮಂಡಿಸಿರುವ ಸಾಮಾಜಿಕ , ಶೈಕ್ಷಣಿಕ ಸಮೀಕ್ಷೆಯನ್ನು ಮೇ 9 ರಂದು ನಡೆಯುವ ಸಚಿವ ಸಂಪುಟದಲ್ಲಿ ಸಚಿವರೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಅವರು ತಿಳಿಸಿದರು.

50% ಮೀಸಲಾತಿಯನ್ನು ಬದಲಾಯಿಸಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸಂವಿಧಾನದ 15 ವಿಧಿ, ಕಲಂ (5) ರಂತೆ ಮೀಸಲಾತಿಯನ್ನು ಕೊಡಬೇಕೆಂದು ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ. ಇದನ್ನು ಪರಿಗಣಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದಾಗಿ ತಿಳಿಸಿದರು.

**ಬಿಜೆಪಿ ಸಾಮಾಜಿಕ ನ್ಯಾಯದ ಪರ ಎಂದಿಗೂ ಇಲ್ಲ:**

ಕೇವಲ ಘೋಷಣೆ ಮಾಡಿದರೆ ಸಾಲದು, ಅದನ್ನು ಜಾರಿಗೆ ತರಬೇಕು. 73–74 ರ ತಿದ್ದುಪಡಿಗಳನ್ನು ಬಿಜೆಪಿ ವಿರೋಧಿಸಿತ್ತು. ಇತಿಹಾಸ ನೋಡಿದರೆ ಬಿಜೆಪಿ ಸಾಮಾಜಿಕ ನ್ಯಾಯದ ಪರ ಎಂದಿಗೂ ಇಲ್ಲ. ಕೂಡಲೇ ಯಾವ ದಿನಾಂಕದಿಂದ ಜನಗಣತಿ, ಜಾರಿ ಗಣತಿ ಮಾಡುತ್ತಾರೆ ಎಂದು ತಿಳಿಸಬೇಕು. ಜಾತಿ ಗಣತಿ ಮಾಡುವಾಗ ಸಾಮಾಜಿಕ ಆರ್ಥಿಕ ಸಮೀಕ್ಷೆ ಕೂಡ ಆಗಬೇಕು. ಇಲ್ಲಿಯವರೆಗೂ ಇದನ್ನು ವಿರೋಧಿಸುತ್ತಿದ್ದವರು ಈಗ ಸಮೀಕ್ಷೆ ನಡೆಸುವ ಘೋಷಣೆ ಮಾಡಿದ್ದಾರೆ ಎಂದರು.

**ಕುಮಾರಸ್ವಾಮಿ ಸಚಿವರನ್ನು ಹೆದರಿಸಿ ವರದಿ ಪಡೆಯಲಿಲ್ಲ:**

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರು ಜಾತಿ ಗಣತಿ ಹಾಗೂ ಜನಗಣತಿ ನಡೆಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಹಾಡಿ ಹೊಗಳಿದ್ದು, ರಾಜ್ಯ ಸರ್ಕಾರದ ಸಮೀಕ್ಷೆಗೆ ಯಾವುದೇ ಪಾವಿತ್ರ್ಯತೆ ಇಲ್ಲ ಏನು ಹೇಳಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಸಮ್ಮಿಶ್ರ ಸರ್ಕಾರದಲ್ಲಿ ಪುಟ್ಟರಂಗಶೆಟ್ಟಿ ಹಿಂದುಳಿದ ವರ್ಗಗಳ ಸಚಿವರಾಗಿದ್ದಾಗ ಜಾತಿ ಗಣತಿ ವರದಿ >>4

# ಇಂದು ಎಸ್ಸೆಸ್ಸೆಲ್ಸಿ ಪರೀಕ್ಷೆ–1 ಫಲಿತಾಂಶ ಆನ್ಲೈನ್‌ನಲ್ಲಿ ಪ್ರಕಟ

■ **ಹಂಪಿ ಟೈಮ್ಸ್ ಹೊಸಪೇಟೆ**



2025ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ–1ರ ಪರೀಕ್ಷೆಗಳ ಫಲಿತಾಂಶ ಮೇ 2 ರಂದು ಬೆಳಿಗ್ಗೆ 11.30ಕ್ಕೆ ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಲಿಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಲಿದ್ದಾರೆ. ಮಾ.21 ರಿಂದ ಏ.4ರವರೆಗೆ ನಡೆದಿ ಪರೀಕ್ಷೆ–1 ರ ಫಲಿತಾಂಶವನ್ನು ಮಧ್ಯಾಹ್ನ 12.30ರ ನಂತರ http://karresults.nic.in ಜಾಲತಾಣದಲ್ಲಿ ವೀಕ್ಷಿಸಬಹುದಾಗಿದೆ ಎಂದು ಮಂಡಲಿ ಅಧ್ಯಕ್ಷ ಹೆಚ್. ಬಸವರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳಿಗೆ ಶುಭವಾಗಲಿ

**ಪಾಲಕರೇ, ವಿದ್ಯಾರ್ಥಿಗಳೇ ಗಮನಿಸಿ**

ಎಸ್ಸೆಸ್ಸೆಲ್ಸಿ ಫಲಿತಾಂಶ ಇಂದು ಪ್ರಕಟಗೊಳ್ಳಲಿದೆ. ಉತ್ತಮ ಅಂಕಗಳು ಬಂದವರಿಗೆ ಶುಭಾಶಯಗಳು. ಕೆಲವರಿಗೆ ಖುಷಿಯಾದರೆ, ಇನ್ನೂ ಕೆಲವರಿಗೆ ನಿರಾಶೆಯಷ್ಟೇ. ಆದರೆ ಯಾರೂ ಆತ್ಮವಿಶ್ವಾಸ ಕಳೆದುಕೊಳ್ಳಬಾರದು.

ಪರೀಕ್ಷೆಯ ಅಂಕಗಳು ಜೀವನದ ಅಂತಿಮ ತೀರ್ಪು ಅಲ್ಲ. ಇದು ನಿಮ್ಮ ಪ್ರಯತ್ನದ ಒಂದ ಹಂತ ಮಾತ್ರ. ಅಲ್ಪ ಅಂಕಗಳು ಬಂದವರಿಗೂ ಜೀವನದಲ್ಲಿ ಜಯಿಸೋ ಅವಕಾಶ ಇನ್ನೂ ಮುಂದಿದೆ. ಈ ಸಂದರ್ಭದಲ್ಲಿ ಪಾಲಕರು ಕಡಿಮೆ ಅಂಕ ಪಡೆದ ಮಕ್ಕಳಿಗೆ, ತಡವಾದರೂ ಖಚಿತವಾಗಿ ಗುರಿ ತಲುಪಬಹುದು ಎಂಬ ದೈರ್ಯವನ್ನು ತಮ್ಮ ಮಕ್ಕಳಿಗೆ ತುಂಬಬೇಕು. ವಿದ್ಯಾರ್ಥಿಯೊಬ್ಬರ ಭವಿಷ್ಯ ಒಂದು ಫಲಿತಾಂಶ ತೀರ್ಮಾನಿಸುವುದಿಲ್ಲ. ನಿರಂತರ ಕಲಿಕೆ, ಅಭ್ಯಾಸ, ನಂಬಿಕೆ, ಪರಿಶ್ರಮ ಮೈಗೋಡಿಸಿಕೊಂಡಲ್ಲಿ ಫಲ ನಿಶ್ಚಿತ.

– ಹಂಪಿ ಟೈಮ್ಸ್ ಬಳಗ,
ಹೊಸಪೇಟೆ, ವಿಜಯನಗರ


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ

ನಂ.1 ಜಿಲ್ಲಾಮಟ್ಟದ ದಿನಪತ್ರಿಕೆ

Promote your SSLC & PUC achievers and admission updates in

**HAMPI TIMES**
**PRINT & DIGITAL**
**DAILY NEWS PAPER**

Reach Thousands of parents and students.
both in print & online

**BOOK NOW**

Email: hampitimes@gmail.com



Book All Types of legal /Public Notice Display Ads in Newspaper @ Affordable Price

Property Purchase Notice - Lost & Found Notice -
Summons Notice - Tender/E-Tender Notice - E-Auction Notice Etc..

9448633038

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## REQUIRED

Are you passionate about creativity, branding and making ideas come alive?
We're looking for dynamic individuals to join our Advertising & Marketing Team!

**POSITION**
- Advertising Manager
- Ad Sales Executive

**LOCATION**
Vijayanagara Dist.

Who can Apply:
- MBA/BBA in Marketing, Mass Communication, related fields
- Experience in media ad sales or Marketing preferred
- Freshers with strong passion for advertising are welcome too!

Submit Your CV and Portofolio :
96866 63125

## ನಿಮ್ಮ ಬೆಂಬಲವೇ ಪತ್ರಿಕೆಯ ಸ್ವತಂತ್ರತೆಗೆ ಬಲ

ಮುದ್ರಣ ಮಾಧ್ಯಮವು ಸಮಾಜದಲ್ಲಿ ಅರಿವು, ಚಿಂತನೆ ಮತ್ತು ಪ್ರಜ್ಞೆ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ನಾವು ನಿಮಗಾಗಿ ಪ್ರತಿದಿನದ ನಿಖರ ಮತ್ತು ನಿಸ್ಪಕ್ಷಪಾತ ವರದಿ ಮತ್ತು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮೌಲ್ಯಯುತ ಲೇಖನಗಳನ್ನು ಹಂಚಿಕೊಳ್ಳುತ್ತಿದ್ದೇವೆ. ಮುದ್ರಣ ಮಾಧ್ಯಮದ ಉಳಿವು ಒಂದು ಸಾಮೂಹಿಕ ಜವಾಬ್ದಾರಿಯಾಗಿದೆ. ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಬೇಕಿದೆ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂ ನಿರೀಕ್ಷಿಸಲಾಗದು. ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ನಿಮ್ಮ ಬೆಂಬಲವೇ ನಮ್ಮ ಕಾಯಕಕ್ಕೆ ಬಲ.

ಹಂಪಿ ಟೈಮ್ಸ್, ಹೊಸಪೇಟೆ : ಮೊ: 9448633038

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಕಾಲ ಯಾರಿಗೂ ಕಾಯುವುದಿಲ್ಲ....... ಸಮಯ ಪ್ರಜ್ಞೆವುಳ್ಳವರು ಸರ್ವೋತ್ತಮರು!

ಜಗತ್ತಿನಲ್ಲಿ ಒಂದೇ ಸಮನಾಗಿ ನೋಡುವುದು ಸಮಯ ಮಾತ್ರ. ಬಡವನಿಗೂ ಒಂದೇ ಶ್ರೀಮಂತನಿಗೂ ಒಂದೇ". ನಾವು ಸಮಯಕ್ಕೆ ಬೆಲೆ ಕೊಟ್ಟರೆ ಸಮಯ ನಮಗೆ ಬೆಲೆ ಕೊಡುತ್ತದೆ, ಕಳೆದು ಹೊದ ಸಮಯ ಮತ್ತೆ ಮರಳಿಬಾರದು ಇದು ಎಲ್ಲರಿಗೂ ಗೊತ್ತಿದ್ದ ವಿಷಯ.

ಸಮಯಕ್ಕೆ ತಕ್ಕಂತೆ ಜೀವನದಲ್ಲಿ ಎಲ್ಲವುಗಳನ್ನು ಕಲಿಯಬೇಕು. ಸಂಪೂರ್ಣ ಸಮಯದ ಸದುಪಯೋಗ ಮಾಡಿಕೊಳ್ಳದಿದ್ದರೂ ಪರವಾಗಿಲ್ಲ, ಬಾಲದಿಂದ ನಮಗೆ ಅಗತ್ಯ ಇರುವ ವಿದ್ಯಾಭ್ಯಾಸ, ಹಾಗೂ ನೈತಿಕ, ಸಾಮಾಜಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು, ಹಾಗೂ ನಮ್ಮ ಜವಾಬ್ದಾರಿಗಳನ್ನು ನಿಭಾಯಿಸಬೇಕು....

ನಾಡಿದ್ದು ಮಾಡೋಣ ಅನ್ನೋದಕ್ಕಿಂತ ನಾಳೆ, ನಾಳೆ ಅನ್ನೋದಕ್ಕಿಂತ ಇಂದು, ಈಗಲೇ ಮಾಡುವ ಮನಸ್ಥಿತಿ ನಮ್ಮಲ್ಲಿರಬೇಕು. ಏಕೆಂದರೆ ಕಳೆದು ಹೋದ ಸಮಯ ಸಿಗಲಾರದು.

ಅನೇಕ ದುರ್ಘಟನೆಗಳು ಸಮಯಪ್ರಜ್ಞೆಯಿಂದ ತಪ್ಪಿವೆ, ಹಾಗೆಯೇ ಸಮಯಕ್ಕೆ ತಕ್ಕಂತೆ ಕಾರ್ಯನಿರ್ವಹಿಸದೆ ಮುಂದೆ ನೋಡೋಣ ಎಂದಾಗ ಅನೇಕ ಜೀವಗಳು ಬಲಿಯಾಗಿದ್ದು ಉಂಟೂ. ಸಮಯ ಕೊಡದೆ ಇದ್ದಾಗ ಎಷ್ಟೊ ಕುಟುಂಬಗಳು ಹಾಳಾಗಿವೆ. ಕುಟುಂಬ ಗಳಿಗೂ ಸಮಯ ಕೊಡದೆ ಇದ್ದಾಗ ಕೂಡ ಸಂಬಂಧಗಳು ಹಾಳಾಗಿವೆ. ಎಷ್ಟೋ ಪಾಲಕರು ನಾವು ನಮ್ಮ ಮಕ್ಕಳಿಗೆ, ನನ್ನ ತಂದೆ ತಾಯಿಗಳಿಗೆ ಎಲ್ಲಾ ರೀತಿ ವ್ಯವಸ್ಥೆಗಳನ್ನು ಪರಿಕಲ್ಪಿಸಿ ಕೊಟ್ಟಿದ್ದೇವೆ, ಊಟಕ್ಕೆ ತಿಂಡಿಗೆ, ಬೆಳ್ಳಿಗೆ ಬಂಗಾರಕ್ಕೆ, ಉಡುಗೆ ತೊಡುಗೆ ಯಾವುದಕ್ಕೂ ಕಮ್ಮಿ ಇಟ್ಟಿಲ್ಲ ಎನ್ನುವ ಭ್ರಮೆಯಲ್ಲಿದ್ದಾರೆ. ಇವರಿಗೆ ಏನು ಗೊತ್ತು "ಹಣಕ್ಕಿಂತ ಸಮಯ ಮುಖ್ಯ" ಎನ್ನುವುದು...

ಉನ್ನತಿಕರಿಸಿದ ತಂತ್ರಜ್ಞಾನದಿಂದ ಈಗ ಸಮಯ ಪ್ರಜ್ಞೆಯಿಂದ ನಡೆಯುವ ಅನೇಕ ದುರ್ಘಟನೆಗಳ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುತ್ತಿರುವುದು ಕೂಡ ವಿಶೇಷವಾಗಿದೆ.

ಹವಾಮಾನದಲ್ಲಾಗುವ ಅನೇಕ ವೈಪರಿತ್ಯಗಳು ಅಂದರೆ.... ವಿಪರೀತ ಮಳೆಯಾಗುವ ಸಾಧ್ಯತೆ, ಅತಿಯಾದ ಬಿಸಿಲು.... ಹೀಗೆ ಘಟನೆಗಳು ಘಟಿಸುವ ಮುನ್ನವೇ ವಿಷಯ ಗೊತ್ತಾಗುತ್ತಿರುವುದರಿಂದ ಸರಕಾರವು ಕೂಡ ಅನೇಕ ಮುಂಜಾಗ್ರತಕ್ರಮಗಳನ್ನು ಕೈಗೊಳ್ಳುತ್ತಿದೆ.

ಸಮಯ ಪ್ರಜ್ಞೆ ಹಾಗೂ ಅನಾಹುತಗಳ ಬಗ್ಗೆ ವಿಶ್ಲೇಷಣೆ ಮಾಡಿದಾಗ ತಾನೇ ಕೇವಲ ಎಂಟು ದಿನಕ್ಕೆ ಮಾತ್ರ ಬಾಹ್ಯಾಕಾಶ ಸಂಶೋಧನೆ ಕೈಗೊಂಡ ಸುನಿತಾ ವಿಲಿಯಂ ಅವರು.... ತಿಂಗಳು ಗಟ್ಟಲೆ ಬಾಹ್ಯಾಕಾಶದಲ್ಲಿ ಉಳಿದು, ಈಗ ಸಮಯ ಪ್ರಜ್ಞೆಯಿಂದ ತೆಗೆದುಕೊಂಡ ಮುಂಜಾಗ್ರತ ಕ್ರಮದಿಂದ ಅವರು ಬದುಕಿ ಬಂದಿದ್ದದ್ದು ಪವಾಡವೇ ಸರಿ....

ನಾವು ಯಾವತ್ತಿಗೂ ಸಮಯಕ್ಕೆ ಬೆಲೆ ಕೊಡಬೇಕು, ಹಾಗೂ ಕೆಟ್ಟ ಘಳಿಗೆ ಬಂದಾಗ, ಕೆಲವು ಕ್ಷಣ ನಾವು ಮೌನವಾಗಿರಬೇಕು ಅಥವಾ ಸ್ಥಳ ಬದಲಾವಣೆ ಮಾಡಿಕೊಳ್ಳಬೇಕು ಅಥವಾ ದೇವರ ಧ್ಯಾನದಲ್ಲಿ ತೊಡಗಿದರೆ.... ಖಂಡಿತ ವಾಗಿಯೂ ಕೆಟ್ಟ ಘಳಿಗೆ ಯಿಂದ ಪಾರಾಗುತ್ತೇವೆ....



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

Scan For Digital Colourful
HAMPI TIMES E-paper

ವಿಪರೀತ ಜಗಳ, ಅತಿಯಾದ ಸಿಟ್ಟು, ಕುಟುಂಬ ಕಲಹಗಳ ಸಂದರ್ಭದಲ್ಲಿ.... ಒಂದು ಕ್ಷಣ ಮೌನವಾಗಿದ್ದರೆ ಎಂತಹ ಕೆಟ್ಟ ಘಳಿಗೆ ಇದ್ದರೂ ಪರಸ್ಥಿತಿಯನ್ನು ಹತೋಟಿಗೆ ತರಬಹುದು.

ಸಾಮಾನ್ಯವಾಗಿ ನಾವು ಬರೆಯುವ ವಿದ್ಯಾಭ್ಯಾಸದ ಪರೀಕ್ಷೆ ಯಲ್ಲಿಯೂ ಕೂಡ, ಎಲ್ಲವೂ ಗೊತ್ತಿದ್ದರೂ ಕೂಡ ಸಮಯದ ಉಪಯೋಗ ಮಾಡಿ ಕೊಂಡು ಬರೆಯದೆ ಇದ್ದಾಗ ಅನುತ್ತೀರ್ಣ ಆಗುತ್ತೇವೆ.... ಒಳ್ಳೆಯ



ಸಮಯ ಬಂದರೆ ಭಿಕ್ಷುಕ ಅರಸನಾಗಬಹುದು, ಅರಸ ಬಿಕ್ಷುಕನು ಆಗಬಹುದು.

ಸುಧಾ ಮೂರ್ತಿಯವರ ಜೀವನದ ಒಂದು ಉದಾಹರಣೆ ಒಳ್ಳೆಯ ಉದಾಹರಣೆ ನೋಡಿ... ಅದೇನೆಂದರೆ ಅವರು ಆಗಿನ ಕಾಲದಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿರುವಾಗ ಒಬ್ಬಳೇ ಮಹಿಳಾ ವಿದ್ಯಾರ್ಥಿನಿಯಾಗಿದ್ದರು, ಅನೇಕ ಸಮಸ್ಯೆಗಳು ಉಂಟಾಗುತ್ತಿದ್ದರು ಧೈರ್ಯಗೆಡದೆ ತನ್ನ ಪದವಿಯನ್ನು ಪೂರೈಸಿ, ಪ್ರತಿಷ್ಠಿತ ಕಂಪನಿಯಲ್ಲಿ ಉದ್ಯೋಗ ಅರಸಿ ಹೋಗಿ ಅನೇಕ ಸವಾಲುಗಳನ್ನು ಎದುರಿಸುತ್ತಾ ತನ್ನ ಉದ್ಯೋಗ ಪ್ರವೃತ್ತಿಯನ್ನು ಮುಂದುವರಿಸಿದರು, ಮುಂದೆ ಸಮಯ ನೋಡಿ ಈಗ ಇನ್ಫೋಸಿಸ್ ಎಂಬ ದೊಡ್ಡ ಕಂಪನಿಯ ಮಾಲೀಕರು ಹಾಗೂ ನೂರಾರು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉದ್ಯೋಗವಕಾಶ ಕಲ್ಪಿಸಿದ್ದು ಅಲ್ಲದೆ , ಅನೇಕ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ನೀರ್ಗತಿಕರಿಗೆ ಸಹಾಯ ಮಾಡುತ್ತಿದ್ದು ವಿಶ್ವಕ್ಕೆ ಮಾದರಿಯಾಗಿದ್ದಾರೆ.

ಅನೇಕ ವಿದ್ಯಾರ್ಥಿಗಳಿಗೆ ಸಮಯದ ಬಗ್ಗೆ ಕೇಳಿದಾಗ, ಆ ಕಾಲದಲ್ಲಿ ನಾನು ಶಾಲೆ ಕಲಿತಿಲ್ಲ, ನನಗೆ ಶಿಕ್ಷಣದ ಮಹತ್ವ ಗೊತ್ತಿರಲಿಲ್ಲ, ಈಗ ನನಗೆ ಚಿಕ್ಕ ಉದ್ಯೋಗವಾದರೂ ಸರಿ ಕೊನೆಯ ಪಕ್ಷ ಏಳನೆಯ ತರಗತಿಯಾದರೂ ಉನ್ನತ ದರ್ಜೆಯಲ್ಲಿ ಪಾಸ್ ಆಗಬೇಕಾಗಿತ್ತು, ಸಮಯ ಮರಳಿ ಬರುವುದಿಲ್ಲ, ಇದಕ್ಕಾಗಿ ನಾನು ಈಗ ಪಶ್ಚತಾಪ ಪಡುತ್ತಿದ್ದೇನೆ, ಮುಂದೆ ನನ್ನ ಮಕ್ಕಳಿಗಾದರೂ ಉನ್ನತ ಶಿಕ್ಷಣವನ್ನು ಕೊಡಿಸುವ ನಿಟ್ಟಿನಲ್ಲಿ ಅವರ ಸಮಯವನ್ನು ವ್ಯರ್ಥ ಮಾಡದೆ ಅವರ ಶಿಕ್ಷಣದ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿದ್ದೇನೆ ಅಂತ ಕೇಳಿದರು... ಹೀಗೆ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯ ಹೇಳಿದಾಗ... ನನಗೂ ಕೂಡ ನನ್ನ ಶಿಕ್ಷಣದ ಬಗ್ಗೆ ಅರಿವಾಯಿತು. ನಾನು ಕೂಡ ನನ್ನ ವ್ಯಾಸಂಗದ ಸಮಯದಲ್ಲಿ ಇನ್ನು ಹೆಚ್ಚಿನ ವಿದ್ಯಾಭ್ಯಾಸ ಮಾಡಿದರೆ ಇನ್ನೂ ಪ್ರತಿಷ್ಠಿತ ಹುದ್ದೆಯಲ್ಲಿ ಇರುತ್ತಿದ್ದೆ. ಕಡಿಮೆ ಅವಧಿಯಲ್ಲಿ ಪಡೆದ ಶಿಕ್ಷಣಕ್ಕೆ ತಕ್ಕ ಹುದ್ದೆಯನ್ನು ಅಲಂಕರಿಸಿದ್ದೇವೆ, ಸಮಯ ಪ್ರಜ್ಞೆಹಾಗೂ ಹೆಚ್ಚಿನ ಸಮಯ ತೆಗೆದುಕೊಂಡು ಚೆನ್ನಾಗಿದೆ ಉನ್ನತ ಶಿಕ್ಷಣ ಪಡೆದರೆ.... ಹೆಚ್ಚಿನ ಸಾಧನೆ ಮಾಡಬಹುದು. ಹಾಗೆ ಎಲ್ಲವನ್ನು ಕಡಿಮೆ ಅವಧಿಯಲ್ಲಿಯೇ ಪಡೆಯುವ ಕನಸು ಕಂಡವರು ಯಾವತ್ತಿಗೂ ಯಶಸ್ವಿಯಾಗುವುದಿಲ್ಲ, ಅದಕ್ಕೆ ಹೇಳುವುದು ತಾನೆ "ಅವಸರವೇ ಅಪಘಾತಕ್ಕೆಕಾರಣ" ಅಂತ.

ಇಲ್ಲೊಂದು ಚಿಕ್ಕ ಕಥೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ..... ಅರಬ್ಬಿ ದೇಶದಲ್ಲಿ ಮುಸ್ತಾಫ ಎಂಬ ಒಬ್ಬ ಶ್ರೀಮಂತನಿದ್ದನು.... ಅವನದು ಚಿಕ್ಕ ಕುಟುಂಬ ಹೆಂಡತಿ ಹಾಗೂ ಒಬ್ಬನೆ ಮಗನಿದ್ದನು.... ಇವನ ಹೆಸರು ಅಲ್ಲಾವುದ್ದೀನ್....

ತಂದೆ ತನ್ನ ಮಗನಿಗೆ ಬೇಕಾದ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದ, ಯಾವುದಕ್ಕೂ ಕಮ್ಮಿ ಇರಲಿಲ್ಲ, ಆದರೆ ಆ ಮಗನಿಗೆ ಸಮಯ ಕೊಡುತ್ತಿರಲಿಲ್ಲ.

ಯಾವುದೇ ಕಷ್ಟ ಕಾರ್ಪಣ್ಯಗಳು ಇಲ್ಲದೆ ಎಲ್ಲವನ್ನು ಅನುಭವಿ ಸುತ್ತಿರುವ ಅವನಿಗೆ, ಶಿಕ್ಷಣದ ಮಹತ್ವ ವಾಗಲಿ, ಕಷ್ಟದ ಕಲ್ಪನೆ ಆಗಲಿ, ಹಣದ ಬಗ್ಗೆ ಆಗಲಿ, ಹಾಗೂ ಸಂಬಂಧಗಳ ಬೆಲೆ ಗೊತ್ತಿರಲಿಲ್ಲ.

ತಿಂದು ಉಂಡು ಪೋಲಿ ಹುಡುಗರೊಂದಿಗೆ ಆಡುತ್ತಿದ್ದ ಇವನ ಬಗ್ಗೆ, ಅಜ್ಜ ಅನೇಕ ಬಾರಿ ತನ್ನ ಮಗನಿಗೆ ತಿಳಿಸಿದ. ಎಲ್ಲವನ್ನು ಕೊಡಿಸಬೇಡ, ನಿನ್ನ ಮಗನ ಕಡೆ ಗಮನ ಕೊಡು, ಅವನಿಗೆ ಸಮಯ ಕೊಡು ಶಿಕ್ಷಣದ ಮಹತ್ವ ತಿಳಿಸುವ. ಹೀಗೆ ಹೇಳುತ್ತಿದ್ದರು. ತಂದೆಯ ಮಾತಿಗೆ ಕಿವಿಗೊಡದೆ. ನನ್ನ ಮಗನಿಗೆ ಏನು ಕಮ್ಮಿ ಇಲ್ಲ ನಮ್ಮ ಬಳಿ ಎಲ್ಲವೂ ಇದೆ ಎಂಬುದು ಅವನ ಕಲ್ಪನೆಯಾಗಿತ್ತು. ಮುನ್ನೊಂದು ದಿನ ರಸ್ತೆ ಅಪಘಾತದಲ್ಲಿ ಮುಸ್ತಾಫಾ ತೀರಿಕೊಂಡಾಗ...

ಅವನ ತಾಯಿ ಕೊಡು ಅವನಿಗೆ ಯಾವುದೇ ರೀತಿಯ ಕೊರತೆ ಇಲ್ಲದೆ ಪಾಲನೆ ಪೋಷಣೆಮಾಡುತ್ತಿದ್ದಳೂ, ಈಗಲೂ ಕೂಡ ಶಿಕ್ಷಣದ ಹಾಗೂ ಸಂಬಂಧಗಳ ಬಗ್ಗೆ ಯಾವುದೇ ರೀತಿಯ ಅಗತ್ಯತೆ ಇಲ್ಲದೆ, ಐಶಾರಾಮಿ ವಿಲಾಸಿ ಜೀವನ ಮಾಡುತ್ತಿದ್ದನು. ತಾಯಿಗೆ ಆಗಾಗ ಆರೋಗ್ಯ ಸಮಸ್ಯೆ, ಒಂಟಿತನ ಕಾಡುತ್ತಿದ್ದಾಗ... ಮಗನೊಂದಿಗೆ ಸಮಸ್ಯೆಯನ್ನು ಹೇಳುತ್ತಿರುವಾಗ, ಮಗ ಯಾವುದಕ್ಕೂ ಲೆಕ್ಕಿಸದೆ. ಹೀಗೆ ತನ್ನ ಪೋಲಿತನ ಮುಂದುವರಿಸಿದ. ಪಕ್ಕ ಸೋಮಾರಿ ಯಾದ ಇವನಿಗೆ ಶಿಕ್ಷಣದ ಮಹತ್ವ ಹಾಗೂ ಹಣ ಹಾಗೂ ಬಂಧುಗಳ ಮಹತ್ವದ ಬಗ್ಗೆ ತಾಯಿಯು ಕೂಡ ತಿಳಿಸುವಲ್ಲಿ ಬಹಳ ಸಮಯ ತೆಗೆದುಕೊಂಡಳು, ಹಾಗೂ ಅವನಿಗೆ ಎಲ್ಲವುಗಳ ಮಹತ್ವ ಗೊತ್ತಾಗು ವಷ್ಟರಲ್ಲಿ ತಾಯಿಯನ್ನು ಕಳೆದುಕೊಂಡನು.

ನೋಡಿ.... ವಯಸ್ಸಿಗೆ ತಕ್ಕಂತೆ ವಿದ್ಯಾಭ್ಯಾಸ ಮಾಡೋದು.. ವಿಲಾಸಿ ಜೀವನ ಮಾಡುತ್ತಿದ್ದ ಇವನಿಗೆ ಅರಿವು ಹಾಗೆ ಆಗುವಷ್ಟ ರಲ್ಲಿ ಎಲ್ಲವೂ ಮೀರಿ ಹೋಗಿತ್ತು. ಇಲ್ಲಿ ಪಾಲಕರು ಕೂಡ ತಮ್ಮ ಸಮಯ ಪ್ರಜ್ಞೆಯನ್ನು ಮರೆಯಬಾರದು.

ಅದಕ್ಕೆ ಹೇಳುವುದು ಎಲ್ಲದಕ್ಕೂ ಕಾಲವೇ ಉತ್ತರ ಕೊಡುತ್ತದೆ.....

ಸಮಯದ ಸದುಪಯೋಗ ಮಾಡಿಕೊಳ್ಳುವವನು ಯಾವತ್ತಿಗೂ ಯಶಸ್ವಿಯ ದಾರಿಯಲ್ಲಿರುತ್ತಾನೆ....

So...time is very precious than d mony....

# ವಿದ್ಯಾರ್ಥಿಗಳಲ್ಲಿ ಶಬ್ದ ಭಂಡಾರ – ಉಚ್ಚಾರದ ಕೊರತೆಗಳಿವೆ

## ಹಿಂದೂಸ್ತಾನಿ ಸಂಗೀತ ಗಾಯಕ ಡಾ.ಮೃತ್ಯುಂಜಯ ಶೆಟ್ಟರ ಅಭಿಮತ । ಮೊಬೈಲು ಬಿಟ್ಟು ಪುಸ್ತಕಗಳನ್ನ ಓದಿ

■ ಹಂಪಿ ಟೈಮ್ಸ್ ಹೊಸಪೇಟೆ

ಕನ್ನಡದ ಬಹುದೊಡ್ಡ ಭಾಷಿಕ ಪರಂಪರೆಗೆ, ಜಗತ್ತಿನ ಎಲ್ಲ ಸಂಕಷ್ಟಗಳಿಗೆ ಉತ್ತರ ಸಿಗುವುದು ವಚನಗಳಿಂದ. ವಚನಗಳು ಪರಾವಲಂಬಿ ಅಲ್ಲ, ಮುಕ್ತಕಗಳು ಎಂದು ವಿಶ್ರಾಂತ ಪ್ರಾಚಾರ್ಯರು ಹಾಗೂ ಹಿಂದೂಸ್ತಾನಿ ಸಂಗೀತ ಗಾಯಕರಾದ ಡಾ.ಮೃತ್ಯುಂಜಯ ಶೆಟ್ಟರ ಅವರು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ಸಂಗೀತ ಮತ್ತು ನೃತ್ಯ ವಿಭಾಗದಿಂದ ಬುಧವಾರ ಸಾಂಸ್ಕೃತಿಕ ನಾಯಕ, ವಿಶ್ವಗುರು ಶ್ರೀ ಬಸವ ಜಯಂತಿ ಪ್ರಯುಕ್ತ ಬಸವಗಾನಸುಧೆ ಮತ್ತು ವಿಶೇಷ ಉಪನ್ಯಾಸ ವಚನಗಾಯನ ಪರಂಪರೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಮೊಬೈಲ್‌ಗಳನ್ನು ದೂರಇಟ್ಟು ಹರಿಹರ ರಾಘವಾಂಕ, ರನ್ನ, ಜನ್ನ, ಎಲ್ಲರನ್ನು ಓದಬೇಕು. ಕಾದಂಬರಿ, ವಿಮರ್ಶೆ, ಕಾವ್ಯ, ವಚನಕಾರರ ಬದುಕು ಎಲ್ಲವನ್ನು ಅಧ್ಯಯನ ಮಾಡಬೇಕು. ಫ.ಗು. ಹಳಕಟ್ಟಿ, ಹರ್ಡೇಕರ್ ಮಂಜಪ್ಪ ಇವರನ್ನು ನೆನೆಯಬೇಕು. ಆಗ ವಚನಗಾಯನ ಸರಾಗ ಆಗುತ್ತದೆ. ಇಂದಿನ ದೊಡ್ಡ ಕೊರತೆ ಎಂದರೆ ಓದು, ದಿನದ ಇಪ್ಪತ್ನಾಲ್ಕು ತಾಸು ಗೂಗಲ್‌ದಾಗ ಕೂಡಬೇಡಿರಿ. ಒಳ್ಳೆಯ ಪುಸ್ತಕಗಳು ಇವೆ ಓದಿರಿ ಎಂದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಕಿವಿಮಾತು ಹೇಳಿದರು.



ಪುಟ್ಟರಾಜ ಗವಾಯಿ ಹಾಗೂ ಪಂಚಾಕ್ಷರಿ ಗವಾಯಿಗಳು ಕನ್ನಡದ ಮೇಲಿನ ಅಭಿಮಾನದಿಂದ ವಚನಗಾಯನ ಪರಂಪರೆಗೆ ಬುನಾದಿ ಹಾಕಿದರು ಎಂದು ತಿಳಿಸುತ್ತ, ಇಂದಿನ ವಿದ್ಯಾರ್ಥಿಗಳಲ್ಲಿ ಅಭ್ಯಾಸದ ಕೊರತೆ, ಶಬ್ದ ಭಂಡಾರದ ಕೊರತೆ, ಉಚ್ಚಾರದ ಕೊರತೆಗಳಿವೆ. ನಿರಂತರ ಅಧ್ಯಯನದಿಂದ ಗಾಯನದಲ್ಲಿ ತಿದ್ದಿಕೊಳ್ಳಬೇಕು. ಪ್ರಪಂಚದ 32 ಸಾವಿರ ಚರ್ಚುಗಳಲ್ಲಿ ಬಸವಣ್ಣನವರ ಕಳಬೇಡ, ಕೊಲಬೇಡ ವಚನದ ಕುರಿತು ಚರ್ಚೆ ನಡೆದಿದೆ ಎಂದು ಹೇಳಿ ಪಹಾಡಿ ರಾಗದಲ್ಲಿ ನೆನೆಹಿನ ನಲ್ಲನು ಮನೆಗೆ ಬಂದೊಡೆ ಎಂಬ ಅಕ್ಕನ ವಚನವನ್ನು ಸ್ವತಃ ಹಾಡಿ ಪ್ರಾತ್ಯಕ್ಷಿಕೆ ಹಾಡಿದರು.

ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅಧ್ಯಕ್ಷತೆವಹಿಸಿ ಮಾತನಾಡಿ, ಸಾಹಿತ್ಯ ಮತ್ತು ಸಂಗೀತದ ನಡುವೆ ಅಂತರ್‌ಸಂಬಂಧವಿದೆ. ವಚನಗಳು ಜನಸಾಮಾನ್ಯರನ್ನು ತಲುಪಲು ಸಂಗೀತ ಮತ್ತು ಸಂಗೀತಗಾರರೇ ಕಾರಣ. ಸರಳವಾದ ಬದುಕನ್ನು ಸಂಕೀರ್ಣ ಮಾಡಿಕೊಂಡು ನಮಗೆ ಸಮಯವಿಲ್ಲ ಎಂದು ಹೇಳುವ ಈ ಹೊತ್ತಿನಲ್ಲಿ ಸಂಬಂಧಗಳು ಉದ್ದೀಪನಗೊಳ್ಳಲು ಸಂಗೀತ ಕಲೆಯು ಪ್ರಮುಖ ಪಾತ್ರ ವಹಿಸುತ್ತದೆ. ಅಕ್ಕ ಕೇಳವ್ವ ಎಂದು ಹಾಡಿದ ಮಲ್ಲಿಕಾರ್ಜುನ ಮನ್ಸೂರರ ಗಾಯನಕ್ಕೆ ಜನ ಮನಸೋತರು. ವಚನ ಸಾಹಿತ್ಯ ಹಾಡುವಲ್ಲಿ ನಡೆದ ಪ್ರಯೋಗಗಳು ಬೇರೆ ಪ್ರಕಾರಗಳಲ್ಲಿ ನಡೆದಿಲ್ಲ. ಜನರ ಮನಸ್ಸನ್ನು ಸಮರ್ಥವಾಗಿ ಮುಟ್ಟಲು ಹೊಸ ಪ್ರಯೋಗಗಳು ಬೇಕು. ಮಾನಸಿಕ ದೂರ ಇರಿಸಿಕೊಂಡು ಸಂಗೀತ ಕಲೆಯನ್ನು ಆಸ್ವಾದಿಸಬೇಕು. ಜನಪ್ರಿಯ ಸಂಗೀತ ವನ್ನು ಕೊಡುವ ಭರದಲ್ಲಿ ಸಾಹಿತ್ಯವನ್ನು ಕೆಡಿಸ ಬಾರದು ಎಂದರು.

ಸಂಗೀತ ವಿಭಾಗದ ಮುಖ್ಯಸ್ಥ ಡಾ.ವೀರೇಶ ಬಡಿಗೇರ ಅವರು ಮಾರುಬಿಹಾಗ್ ಮಿಶ್ರ ರಾಗದಲ್ಲಿ ಹರನೀವ ಕಾಲಕ್ಕೆ ಸಿರಿಯು ಬೆನ್ನಲ್ಲಿಬಂದು ವಚನವನ್ನು, ವಿದ್ಯಾರ್ಥಿಗಳಾದ ಸಾಗರ್, ದುರ್ಗೇಶ್, ಚಂದ್ರ ಕೌಂಸ್ ರಾಗದಲ್ಲಿ ಎನ್ನಕಾಯವ ದಂಡಿಗೆಯ ಮಾಡಯ್ಯ ವಚನವನ್ನು, ಅಕ್ಷತ ಅವರು ಮಧುವಂತಿ ರಾಗದಲ್ಲಿ ದಯವಿಲ್ಲದ ಧರ್ಮ ಆಹುದಯ್ಯ ವಚನವನ್ನು, ಉಂಬಬಟ್ಟಲು ಬೇರೆ ವಚನವನ್ನು ಬಸಮ್ಮ ಮಾದರ ಅವರು, ಮಾಂಡ್ ಮಿಶ್ರ ರಾಗದಲ್ಲಿ ಬಸವ ನೋಡಮ್ಮ ಈ ವಿಶ್ವಕ್ಕೆಲ್ಲ ಗುರು ಅಂತಾರಾ ಎಂದು ರಂಜನಿ ಅವರು, ಭರತಗುಂಡಿ ಅವರು ನುಡಿದರೆ ಮುತ್ತಿನ ಹಾರದಂತಿರಬೇಕು ವಚನವನ್ನು ಪೂರಿಯ ಧನಾಶ್ರಿ ರಾಗದಲ್ಲಿ ಪ್ರಸ್ತುತ ಪಡಿಸಿದರು. ಸಂಗೀತ ವಿಭಾಗದ ವಿದ್ಯಾರ್ಥಿಗಳಲ್ಲೆರೂ ಬಸವ ಗಾನಸುಧೆಯಲ್ಲಿ ತೇಲಾಡಿಸಿದರು. ಮೈ ಮರೆಸಿದರು. ಗಾನಸುಧೆ ಹರಿಸಿದ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರುಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಿದರು.

ಪ್ರಸಾರಾಂಗದ ನಿರ್ದೇಶಕರಾದ ಡಾ.ಮಾಧವ ಪೆರಾಜೆ, ಮಾಹಿತಿಕೇಂದ್ರದ ಉಪನಿರ್ದೇಶಕರಾದ ಡಾ,ಡಿ. ಮೀನಾಕ್ಷಿ ಉಪಸ್ಥಿತರಿದ್ದರು. ಅಧ್ಯಾಪಕಿ ಡಾ.ಜ್ಯೋತಿ ವಂದಿಸಿದರು. ಗೋಣಿಬಸಪ್ಪ ನಿರೂಪಿಸಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಕಾರ್ಮಿಕ

ಕರ್ಮದಲ್ಲಿ ಕಾಯಕವ
ಮಾಡುವ ಕಾರ್ಮಿಕ
ನಿವನು ದುಡಿಯುವ
ಹಗಲಿರುಳು ನಮಗಾಗಿ

ಯಂತ್ರದೊಡಿಗೆ
ತಂತ್ರವ ಬಳಸುತ
ಕಾರ್ಯವ ಮಾಡುತ
ಸೇವೆಗೈಯುವ ನಮಗಾಗಿ

ಬೆಂಕಿಯಲಿ ಬೇಯುತ
ಧಗೆಯಲಿ ನೊಂದುತ
ಕೆಲಸದಲಿ ನಗು ನಗುತ
ಕಾರ್ಮಿಕನಿರುವ ನಮಗಾಗಿ

ಕಾರ್ಮಿಕನ ಜೀವನವದು
ಹೂ ಮುಳ್ಳಿನ ಹಾಸಿಗೆಯದು
ದುಡಿದೇ ದುಡಿವನು
ವಿಶ್ರಾಂತಿಯಿಲ್ಲದೆ ನನಗಾಗಿ

– ಜಿ.ಆರ್.ಬಸವರಾಜೇಶ್ವರಿ

### ನಿಗ್ರಹವೆಂದು?

ಎಲ್ಲೆಯ ಮೀರಿದ ಧರ್ಮಾಂಧತೆಯು
ಕಲ್ಲಿನ ಹೃದಯವು ದುಷ್ಟರಿಗೆ
ಎಲ್ಲೆಡೆ ತಮ್ಮದೆ ಧರ್ಮವ ಬೆಳೆಸಲು
ಮುಳ್ಳುಗಳಾದರು ಲೋಕಕ್ಕೆ

ಕಾರಣ ನುಡಿವರು ಕೊಲ್ಲಲು ಈ ಜನ
ಬೇರೆಯ ಧರ್ಮದ ಜನರೆಂದು
ಮೋರೆಯ ಮರೆಸುತ ಬರುವರು ಮೆಲ್ಲಗೆ
ಯಾರನೊ ಕೊಲುವರು ಹಿಡಿತಂದು

ಉಗ್ರರ ಉಪಟಳ ಹೆಚ್ಚಲು ತೊಡಗಿದೆ
ವಿಗ್ರಹ ಭಂಜನೆ ಇವರದ್ದು
ಅಗ್ರದ ಆದ್ಯತೆ ಧಮನಿಸಲಿವರನು
ನಿಗ್ರಹಗೊಳ್ಳುವ ದಿನವೆಂದು?

ದೇಶದ ಒಳಗಡೆ ಕೆಲವರು ಇವರನು
ಪೋಷಿಸಿ ಮಾಡುವ ಎಡವಟ್ಟು
ಮೋಸದ ಸಂಚದು ಅರಿವಲಿ ಇದ್ದರು
ದೂಷಿಸೆ ಇವರದು ಹಿಂದೇಟು

ಹೊರಗಿನ ವೈರಿಯ ಪತ್ತೆಗೆ ಸುಲಭವು
ಗುರಿಯನು ಅವರೆಡೆ ಇಡಬಹುದು
ಮರೆಯಲಿ ನೆರವನು ನೀಡುವ ಒಳಗಿನ
ನರಿಗಳನೇತರ ಅರಸುವುದು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

# ಸ್ತ್ರೀ ಸಮಾನತೆಗಾಗಿ ಹುಟ್ಟಿದ ಮನೆಯನ್ನೇ ತೊರೆದ ಬಾಗೇವಾಡಿಯ ಭಾಗ್ಯ ರವಿ ಭಕ್ತಿ ಭಂಡಾರಿ ಬಸವಣ್ಣ



ಪ್ರಾಚೀನ ಕರ್ನಾಟಕದ ಇತಿಹಾಸವನ್ನು ಗಮನಿಸಿದಾಗ ಸಾಮಾನ್ಯವಾಗಿ ದೇವಸ್ಥಾನಗಳು ವಿದ್ಯಾ ಕೇಂದ್ರಗಳಾಗಿದ್ದು ಕಂಡುಬರುತ್ತವೆ. ಅಧ್ಯಯನದ ಉದ್ದೇಶಕ್ಕಾಗಿ ಬ್ರಾಹ್ಮಣರಿಗೆ ರಾಜರು ದಾನವಾಗಿ ಕೊಟ್ಟ ಗ್ರಾಮಗಳನ್ನು ಅಗ್ರಹಾರವೆಂದು ಕರೆಯುತ್ತಿದ್ದರು. ಹೀಗೆ ಮಹಾ ಅಗ್ರಹಾರ ವೆಂದು ಗೌರವ ಹೊಂದಿದ ಬಾಗಲಕೋಟೆ ಜಿಲ್ಲೆ, ಬಾಗೇವಾಡಿಯ 'ಅಗ್ರೇಸರ' ಅಂದರೆ ಆ ಪಟ್ಟಣದ ಮುಖ್ಯಸ್ಥ ಮಂಡೆಗೆಯ ಮಾದಿರಾಜ. ಆತನಿಗೆ ಅನುರೂಪಳಾದ ಹೆಂಡತಿ ಸಾತ್ವಿಕತೆಯೇ ಸ್ತ್ರೀಯಾಗಿ ನಿಂತಿರುವ ಮಾದಾಂಬೆ, ಮಾದಲಾಂಬಿಕೆ, ಈ ಕುಟುಂಬ ಸರ್ವರಿಂದಲೂ ಗೌರವಿಸಲ್ಪಡುತ್ತಿತ್ತು.

ಮಾದಿರಾಜ ಮಾದಲಾಂಬಿಕೆಯರಿಗೆ ದೀರ್ಘಕಾಲದ ವರೆಗೆ ಪುತ್ರ ಸಂತಾನವಾಗಲಿಲ್ಲ. ಸಾಧ್ವಿ ಮಾದಲಾಂಬಿಕೆಯ ಸಾತ್ವಿಕ ಬದುಕೆ ಸಾಕಾರಗೊಂಡಂತೆ ಕೊನೆಗೂ ಅವಳ ಉದರದಿಂದ ಪುಣ್ಯದ ಶಿಶುವಂದು ಉದಿಸಿತು. ಆ ಮುದ್ದಾದ ಶಿಶು ಅದೇ ಆಗ ಚಿಪ್ಪನೊಡೆದು ಹೊರಬಂದ ಮುತ್ತಿನಂತೆ, ನಿರಭ್ರ ನೀಲಾಕಾಶದಲ್ಲಿ ಪ್ರಶಾಂತವಾಗಿ ಬೆಳಗುವ ಚಂದ್ರನಂತೆ, ಸರೋವರದಲ್ಲಿ ಇಬ್ಬನಿಯಿಂದಾವ್ರತವಾಗಿ ಅರಳಿ ನಿಂತ ಕಮಲದಂತೆ, ಏನೆಲ್ಲ ಹೇಳಿದರು ಆ ಮುದ್ದು ಮಗುವನ್ನು ಪೂರ್ಣ ವರ್ಣಿಸಿದಂತಾಗುವುದಿಲ್ಲ. ಮಕ್ಕಳೆ ಹಾಗಲ್ವೆ? ಪಾವಿತ್ರದ ಪ್ರತೀಕಗಳು. ಬಾಗೇವಾಡಿಯಲ್ಲುದಿಸಿದ ಈ ಭಾಗ್ಯರವಿಗೆ 'ಬಸವ'ಎಂದು ಹೆಸರಿಡಲಾಯಿತು. ಎಲ್ಲರ ಮುದ್ದಿನ ಕಣ್ಮಣಿಯಾಗಿ ಬೆಳೆದ ಬಸವ ಬಾಲಕನಾದ. ಬಲು ಕುಶಾಗ್ರಮತಿ ಮತ್ತು ಸೂಕ್ಷ್ಮ ಸಂವೇದಿಯಾಗಿದ್ದ. ದಿನ ನಿತ್ಯ ಮನೆಯಲ್ಲಿ ವಿದ್ವಾಂಸರಗೋಷ್ಠಿಗಳು, ವೇದ, ಮಂತ್ರ ಪಠಣ, ಜಿಜ್ಞಾಸೆ, ಅಸಂಖ್ಯಾತ ಶ್ಲೋಕಗಳು ಬಸವನಿಗೆ ನಿರರ್ಗಳವಾದವು. ಉಪನಿಷತ್ತಿನ ಶ್ಲೋಕಗಳು ತುದಿನಾಲಿಗೆಯ ಮೇಲೆ ನಲಿದಾಡಿದವು. ಮಾದಿರಾಜನಿಗೆ ಹಿಗ್ಗೋ ಹಿಗ್ಗು. ತನ್ನ ಮಗ ವಂಶದ ಕೀರ್ತಿಯನ್ನು ಬೆಳಗುತ್ತಾನೆ. ಬ್ರಾಹ್ಮಣ ಸಮುದಾಯದ ಸಮರ್ಥ ನಾಯಕನಾಗಿ ಬೆಳೆದು ಅಗ್ರೇಸರ ಪಟ್ಟಣದ ಗೌರವನ್ನು ದ್ವಿಗುಣಗೊಳಿಸುತ್ತಾನೆ ಎಂದು ಕೊಂಡಿದ್ದರು. ಯಾರ್ಯಾರ ಬದುಕು ಹೇಗೆ ಬದಲಾಗುತ್ತದೆ ಎಂದು ಬಲ್ಲವರಾರು? ಸೂಕ್ಷ್ಮ ಸಂವೇದನಶೀಲನಾದ ಬಸವಣ್ಣನಿಗೆ ತನ್ನ ಪರಿಸರದ ಬ್ರಾಹ್ಮಣ ವರ್ಗದ ಜೀವನ ಬೇಸರ ತರಿಸಿತು. ಇವರ ನಡೆಯೊಂದು ಪರಿ ನುಡಿ ಒಂದು ಪರಿ ಎನ್ನಿಸಿದೊಡಗಿತು. ಯತ್ರ ನಾರೆಸ್ತು ಪೂಜ್ಯಂತೆ ರಮಂತೆ ತತ್ರ ದೇವತಃ ಎಂದರೆ ಎಲ್ಲಿ ಹೆಣ್ಣು ಮಕ್ಕಳು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಇರುತ್ತಾರೆ ಎಂದು ಒಂದು ಕಡೆ ಹೇಳುವುದು, ಇನ್ನೊಂದೆಡೆ ಅವರಿಗೆ ಧಾರ್ಮಿಕ ಹಕ್ಕನ್ನು ನೀಡದೆ ಅವರ ಮುಕ್ತಿಗೆ ಒಡ್ಡಿದ ಅಡೆ–ತಡೆ ಎಂದು ಭಾವಿಸುವುದು, ಒಳ ಹೊರಗೆ ಒಂದೇ ಇರಬೇಕು. ಅಂತ: ಕರಣ ನಿರ್ಮಲವಾಗಿರಬೇಕು. ನಿಜವಾಗಿ ಎಲ್ಲ ಜೀವಿಗಳಲ್ಲಿಯೂ ದೇವರನ್ನು ಕಾಣುವಂತಹ ಆಗಬೇಕು ಎಂದು ಬಸವ ಬಯಸುತ್ತಿದ್ದ. ಆತ ಬೆಳದಂತೆ ಆಲೋಚನಾ ಶಕ್ತಿಯು ಬೆಳೆಯಿತು. ವೇದಶಾಸ್ತ್ರ ಪುರಾಣಗಳನ್ನು ದಾಟಿಕೊಂಡು ಬ್ರಾಹ್ಮಣರ ಶುಷ್ಕ ಸಂಸ್ಕಾರಗಳನ್ನು ದಾಟಿಕೊಂಡು ಅಗ್ರಹಾರದ ವಿಧಿ ನಿಯಮಗಳನ್ನು ದಾಟಿಕೊಂಡು ಜನದತ್ತ ನಿಜದ ಜಗದತ್ತ ನಡೆಯಲು ಬಸವನ ಮನಸ್ಸು ಹಾತೊರೆಯ ತೊಡಗಿತು.



ಉಮಾ ಗವೀಶ ಕಲ್ಮಠ.
ಶಿಕ್ಷಕಿ, ಅಳವಂಡಿ.ಕೊಪ್ಪಳ

Scan For Digital Colourful
HAMPI TIMES E-paper

ಬಸವನಿಗೆ ಆಗ 8 ವರ್ಷ ವೈದಿಕ ಸಂಸ್ಕಾರದ ನಿಯಮಾನಸಾರ ಉಪನಯನವಾಗಬೇಕು. ಬ್ರಾಹ್ಮಣ ನೀಗಾಗಲೇ ಬೇಕಾದ ಷೋಡಷ ಸಂಸ್ಕಾರಗಳಲ್ಲಿ ಉಪನಯನವು ಒಂದು .ಉಪನಯನ ಕಾಲದಲ್ಲಿ ಅವನು ಜನಿವಾರ ಧರಿಸಲೇ ಬೇಕಾಗಿತ್ತು. ಈಗಾಗಲೇ ಇಂತಹ ಸಂಸ್ಕಾರಗಳನ್ನು ಹೊಂದಿಯೂ ಸ್ವಾರ್ಥ ಪರ ಬದುಕನ್ನು ಸಾಗಿಸುತ್ತಿರುವವರನ್ನು ಕಂಡಿದ್ದ ಬಸವನಿಗೆ ಜನಿವಾರ ಧರಿಸುವುದು ಅರ್ಥಹೀನವೆನಿಸಿತು. ಹಾಗಾಗಿ ಉಪನಯನ ಮಾಡಿಸಿಕೊಳ್ಳುವುದಿಲ್ಲವೆಂದು ಜನಿವಾರ ಧರಿಸುವದಿಲ್ಲವೆಂದು ಹಠ ಹಿಡಿದನು. ತಿಳುವಳಿಕೆ ಹೇಳಿದ ತಂದೆಗೆ 'ದೇವ ಮೆಚ್ಚುವುದು ಭಕ್ತಿಗೆ ವಿನಃ ಆಚರಣೆಗೆ ಅಲ್ಲ.' ಎಂಬುದನ್ನು ಬೇಡರ ಕಣ್ಣಪ್ಪನ ಕಥೆ ಹೇಳುವಾಗ ನೀವೇ ಹೇಳಿಲ್ಲವೇ? ಎಂದು ತಂದೆಯನ್ನು ಪ್ರಶ್ನಿಸಿದನು. ತಂದೆ ಹಲವಾರು ರೀತಿಯಲ್ಲಿ ತಿಳಿಹೇಳಿದರು. ನಂತರ ವಾತ್ಸಲ್ಯಮಯಿ ತಾಯಿಯ ಮನಸ್ಸನ್ನು ನೋಯಿಸಬಾರದೆಂದು ತಿಳಿದು ಮನಸ್ಸಿಲ್ಲದಿದ್ದರೂ ಉಪನಯನಕ್ಕಾಗಿ ಒಪ್ಪಿಕೊಂಡನು. ಡಾಂಬಿಕ ಭಕ್ತಿಯನ್ನು ನವಿರಾಗಿಯೇ ಟೀಕಿಸುತ್ತಿದ್ದ ವರ್ಣಾಶ್ರಮದ ಪದ್ಧತಿಯನ್ನು ವಿರೋಧಿಸುತ್ತಿದ್ದನು. ಬಸವನ ವಿರುದ್ಧ ನಿತ್ಯ ದೂರುಗಳು ತಂದೆಗೆ ಬರತೊಡಗಿದವು ಅಗ್ರೀಸರ ಮನೆಯಲ್ಲಿ ಒಂದು ದಿನ ಚರ್ಚೆಗೋಸ್ಕರ ವಿದ್ವಾಂಸರ ಕೂಟ ನೆರದಿತ್ತು. 'ಮಾಯೆಯನ್ನು ಗೆಲ್ಲುವುದು ಹೇಗೆ? ಎಂಬುದೇ ವಿಷಯ.. ಒಬ್ಬ ವಿದ್ವಾಂಸ ಹೆಣ್ಣು ಮಾಯೆ ಎಂಬುದನ್ನು ವಾದಿಸುತ್ತಿದ್ದ. ಹೆಣ್ಣು, ಜೂಜು, ಸೆರೆ, ಇವು ಕೆಟ್ಟ ವಸ್ತುಗಳೆಂದು ವಾದಿಸಿದನು. ಮತ್ತೊಬ್ಬನು ಹೆಂಗಸು 'ಕನಿಷ್ಠ' ಅವಳಿಗೆ ಅದಕ್ಕಾಗಿ ಉಪನಯನ ನಿರಾಕರಿಸಿದ್ದಾರೆ. ಮಹರ್ಷಿ ಮನು ಹೆಣ್ಣು ಮಕ್ಕಳಿಗೆ ಉಪನಯನ ನಿರಾಕರಿಸುತ್ತಾರೆ. ಕೇಳುತ್ತಾ ಕುಳಿತ ಬಸವನಿಗೆ ತಡೆಯಲಾಗಲಿಲ್ಲ. ನಿಲ್ಲಿ, ಮಾತು ಗಂಟೆ ಹೊಡೆದಂತೆ ಮೊಳಗಿತು ಎದ್ದು ನಿಂತು ಸಭೆಗೆ ಕೈ ಮುಗಿದು ದೃಢವಾದ ಧ್ವನಿಯಲ್ಲಿ ಮಾತನಾಡತೊಡಗಿದ. ಏಕೆ? ಉಪನಿಷತ್ ಕಾಲದಲ್ಲಿ ತಾಯಂದಿರಿಗೆ ಧಾರ್ಮಿಕ ಸ್ವಾತಂತ್ರ್ಯ ಇರಲಿಲ್ಲವೇ?. ಅವರು ಯಜ್ಞ ಯಾಗಾದಿಗಳನ್ನು ಮಾಡುತ್ತಿರಲಿಲ್ಲವೇ? ಅಪಾಲ, ವಿಶ್ವ ವಾರ, ಇಂದ್ರಾಣಿ, ಇವರೆಲ್ಲ ಮಂತ್ರ ರಚಿಸುತ್ತಿದ್ದರೆಂಬುದು ನಿಮಗೆ ತಿಳಿಯದೆ? ಲೋಪ ಮುದ್ರೆ, ವಿಶ್ವ ವಾರ, ಘೋಷ, ಇವರನ್ನು ಬ್ರಹ್ಮವಾದಿನಿಯರೆಂದು ಋಗ್ವೇದ ಕರೆದಿಲ್ಲವೇ? ಹೀಗಿರುವಾಗ ನೀವು ಸ್ತ್ರೀಗೆ ಧಾರ್ಮಿಕ ಸಂಸ್ಕಾರಗಳನ್ನು ನಿಷೇಧಿಸುತ್ತಿರುವಿರಿ ಆ ತಾಯಂದಿರು ಮಾಡಿದ ಪಾಪವಾದರೂ ಏನು? ಮಾತು ಕಲ್ಲೋಳಿಟ್ಟ ಅಕ್ಷರದಂತೆ ಖಚಿತವಾಗಿತ್ತು. ಸಭೆಯ ನಡುವಿಂದ ಪ್ರಶ್ನೆಯೊಂದು ತೂರಿ ಬಂತು. ಆಯ್ತಪ್ಪ ಬಸವ ಇಷ್ಟೆಲ್ಲ ಹೇಳುವ ನೀನು ಏಕೆ ನಿನ್ನ ಸೋದರಿಗೆ ಉಪನಯನ ಸಂಸ್ಕಾರಕ್ಕೆ ಏರ್ಪಾಡು ಮಾಡಬಾರದು? ಕೂಡಲೇ ಬಸವ ಉತ್ತರಿಸಿದ, ಹೌದು, ಪೂಜ್ಯರೇ ಆ ಪ್ರಶ್ನೆಯನ್ನು ದೇವರೇ ನಿಮ್ಮ ಬಾಯಲ್ಲಿ ಹೇಳಿದ್ದಾನೆ. ಅಕ್ಕ ನಾಗಮ್ಮನಿಗೆ ಏಕೆ ಸಂಸ್ಕಾರ ಮಾಡಬಾರದು? ಎಂದಾಗ ಸಭೆಯ ತುಂಬಾ ಕೋಲಾಹಲವೆದ್ದಿತು. ಧರ್ಮ ವಿರುದ್ಧವಾಗಿ ಮಾತನಾಡುವ ಈತನನ್ನು ಬಹಿಷ್ಕರಿಸಿ, ಇವನನ್ನು ಗಡಿಪಾರು ಮಾಡಿ, ಬ್ರಾಹ್ಮಣ್ಯವನ್ನೇ ತಿರಸ್ಕಾರದಿಂದ ನೋಡುವ ಈತನಿಗೇಕೆ ಜನಿವಾರ? ಎಂದಾಗ ಬಸವ ತಟ್ಟನೆ ಎದ್ದು ನಿಂತು, ಅಕ್ಕನಾಗಮ್ಮನಿಗೆ ಉಪನಯನ ಸಂಸ್ಕಾರವಿಲ್ಲವೆಂದಾದ ಮೇಲೆ ಜನಿವಾರ ಇಲ್ಲವಾದ ಮೇಲೆ ನನಗಾದರೂ ಏಕೆ? ಇಗೋ ತೆಗೆದುಕೊಳ್ಳಿ ಈ ನಿಮ್ಮ ಜನಿವಾರ ಎಂದು ತಟ್ಟನೆ ಜನಿವಾರವನ್ನು ಹರಿದೊಗೆದ. ಇಲ್ಲಿಗೆ ಈ ಅಗ್ರಹಾರದ ಸಂಬಂಧ ಮುಗಿಯಿತೆಂದು ಕೈಮುಗಿದು ಬಿರ ಬಿರನೆ ನಡೆದೇ ಬಿಟ್ಟ. ಕೆಲ ದಿನಗಳ ಮಟ್ಟಿಗೆ ಬಸವನನ್ನು ಕಾಣಲೆಂದೇ ತವರಿಗೆ ಬಂದಿದ್ದ ಆ ತಾಯಿ ನಡೆದ ಘಟನೆಯಿಂದ ಬೇಸತ್ತು ಅವನ ಹಿಂದೆ ಹಿಂದೆ ಹೋಗುತ್ತಾ 'ಬಸವಾ 'ಎಂದು ಕೂಗಿ ನಿಲ್ಲಿಸಿದಳು. ನೀನು ಎಲ್ಲಿಗೆ ಹೊರಟಿರುವೆ ನೀನಿಲ್ಲದ ಮನೆಯಲ್ಲಿ ನಾನಿರಲಾರೆ. ನನ್ನ ಪತಿ ಮನೆಗೆ ಹೊರಟಿರುವೆ, ನನ್ನೊಡನೆ ಕೂಡಲಸಂಗಮಕ್ಕೆ ಬಾ ಅಲ್ಲಿ ಸಂಗಮನಾಥ ಇದ್ದಾನೆ ಸಂಗಮೇಶ್ವರ ಗುರುಗಳು ಇದ್ದಾರೆ. ಎಂದು ಬಸವನನ್ನು ಕರೆದುಕೊಂಡು ಕೂಡಲಸಂಗಮದತ್ತ ನಡೆದಳು. ಬಸವನು ಭವಿಷ್ಯವನ್ನರಸುತ್ತ, ಬೆಳಕನ್ನರಸುತ್ತ, ಹೀಗೆ ಸಂಗಮನಾಥನಲ್ಲಿ ಆತನಿಗೆ ತನಗರಿಯದಂತಹ ಭಕ್ತಿ ತಲೆದೋರಿತ್ತು. ಸಂಗಮನಾಥನನ್ನು ದರ್ಶಿಸುತ್ತಿದ್ದಂತೆ ಕಣ್ಣಿನಿಂದ ಧಾರಾಕಾರದ ಹರ್ಷದ ಹೊನಲು ಹರಿಯಿತು. ತನ್ನೆಲ್ಲ ಐಹಿಕ ಸಂಬಂಧಗಳನ್ನು ತ್ಯಜಿಸಿ ಬಂದ ಬಸವ, ಸಂಗಮನಾಥನನ್ನೇ ನೋಡುತ್ತಾ ಹಾಡತೊಡಗಿದ. "ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಿಲ್ಲದೆ ನನಗೆ ಮತ್ತಾರು ಇಲ್ಲವಯ್ಯ ಕೂಡಲಸಂಗಮದೇವ, ಹಾಲಲ್ಲದ್ದು ನೀರಲ್ಲದ್ದು ನಿಮ್ಮ ಧರ್ಮ "ಸರ್ವಾರ್ಪಣ ಭಾವದಿಂದ ಶುಶ್ರಾವ್ಯ ಕಂಠದಿಂದ ಬಸವೇಶ ಹಾಡುತ್ತಿದ್ದರೆ ದೇವಾಲಯಕ್ಕೆ ಬಂದವರೆಲ್ಲ ಚಿತ್ರದಲ್ಲಿ ಬರೆದ ಬೊಂಬೆಯಂತಾಗಿ ಬಿಟ್ಟರು.

ಹೀಗೆ ಕೆಲ ದಿನಗಳು ಸಂಗಮನಾಥನಲ್ಲಿ ನಿಸರ್ಗದ ಮಡಿಲಿನಲ್ಲಿ ಸಂತೋಷವಾಗಿದ್ದ ಬಸವೇಶ, ಅಕ್ಕ ನಾಗಲಾಂಬಿಕೆ ಹತ್ತಿರ ಹೋಗಬೇಕೆಂದ. ಬಿಜ್ಜಳ ರಾಜರಲ್ಲಿ ಕೋಶಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಮಾವ ಬಲದೇವ ಬಸವೇಶನಿಗೆ ಅಲ್ಲಿಯೇ ಕೆಲಸ ಕೊಡಿಸಿದ. ಬಿಜ್ಜಳನಿಗೂ ಬಸವಣ್ಣನಿಗೂ ಅನ್ಯೋನ್ಯತೆ ಬೆಳೆಯಿತು. ಬಿಜ್ಜಳನ ರಾಜಧಾನಿ ಮಂಗಳಕೇಳದಿಂದ ಕಲ್ಯಾಣಕ್ಕೆ ಸ್ಥಳಾಂತರವಾದರೂ ಈಗ ಬಸವಣ್ಣ ಹಿರಿಯ ಸಾಮ್ರಾಜ್ಯವೊಂದರ ಮುಖ್ಯ ಭಂಡಾರಿ ಅತ್ಯುನ್ನತ ವಿದ್ಯೆಯ ಪ್ರಭಾವಶಾಲಿ ಅಧಿಕಾರಿಯಾದರು. ಮತ್ತೆ ಹಲವಾರು ಘಟನೆಗಳ ನಂತರ ಬಸವಣ್ಣ ಅಧಿಕಾರವನ್ನೆಲ್ಲ ತ್ಯಜಿಸಿ, ಮತ್ತೆ ಕೂಡಲಸಂಗಮದ ಹಾದಿ ಹಿಡಿದನು. ಅಲ್ಲಿ ಅನುಭವದ ಮಂಟಪದ ಸಾಮಿಪ್ಯ ಕ್ಕೆ ಬಂದನು ಜನಸಾಮಾನ್ಯರು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ವಚನಗಳನ್ನು ರಚಿಸಿದರು. ಕೊನೆಗೆ ತಮ್ಮ ಕೊನೆಗಳಿಗೆಯನ್ನು ಕೂಡಲಸಂಗಮದಲ್ಲಿ ಐಕ್ಯವಾಗುವದರ ಮೂಲಕ ಭಕ್ತರ ಮನದಲ್ಲಿ ಈಗಲೂ ಆರಾಧ್ಯ ದೇವರಾಗಿಯೇ ಉಳಿದುಕೊಂಡಿದ್ದಾರೆ. ಹೀಗೆ ಅಸಂಖ್ಯಾತ ನೊಂದ ಹೃದಯಗಳಿಗೆ ಸಾಂತ್ವನ ನೀಡುವ ತಾಯಿಯಾಗಿ, ಕಂಬನಿ ವರೆಸುವ ಕೈಯಾಗಿ, ದೀನ ದಲಿತ ದುರ್ಬಲರಲ್ಲಿ ಆತ್ಮಭಿಮಾನ ಬಾನೆತ್ತರಕ್ಕೆ ಬೆಳೆದು ನಿಲ್ಲುವಂತೆ ಮಾಡಿದ, ಹೆಣ್ಣು, ಗಂಡು, ಬಡವ, ಬಲ್ಲಿದ ಮೇಲು, ಕೀಳೆನ್ನದೆ ಸರ್ವರನ್ನು ಸಮಾನವಾಗಿ ಕಂಡ ಮಾನವತೆಯ ಹರಿಕಾರ, ಮಹಾ ಮಾನವತಾವಾದಿ, ದಯೆಯೇ ಧರ್ಮವೆಂದು ಸಾರಿದ ದಯಾಮೂರ್ತಿ, ಭಕ್ತಿ ಭಂಡಾರಿ ಬಸವಣ್ಣನ ಜೀವನ ಎಲ್ಲರಿಗೂ ಆದರ್ಶಪ್ರಾಯ.

## 5.18 ಕೋಟಿ ರೂ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ

### ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ– ಸಚಿವ ಬೋಸರಾಜು

**ಹಂಪಿ ಟೈಮ್ಸ್ ರಾಯಚೂರು**

ಗ್ರಾಮೀಣ ಭಾಗದಲ್ಲಿ ರಸ್ತೆ ಕಾಮಗಾರಿಗಳಿಗೆ ಹೆಚ್ಚಿನ ಅನುದಾನವನ್ನು ನೀಡುವ ಮೂಲಕ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುತ್ತೆ. ಅಧಿಕಾರಿಗಳು ಈ ರಸ್ತೆ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಗುಣಮಟ್ಟದೊಂದಿಗೆ ನಿರ್ವಹಿಸ ಬೇಕೆಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಾನ್ವಿ ತಾಲೂಕಿನ ಅಮರೇಶ್ವರ ಕ್ಯಾಂಪ ನಲ್ಲಿ ಕಲ್ಯಾಣ ಪಥ ರಸ್ತೆ ಯೋಜನೆ ಅಡಿ ಪಿಎಂಜಿಎಸ್ ವೈ ವತಿಯಿಂದ ಅಮರೇಶ್ವರ ಕ್ಯಾಂಪ್ ನಿಂದ ಸಾಯಿ ಕ್ಯಾಂಪ್ ವಯ ಪಾರ್ವತಮ್ಮ ಕ್ಯಾಂಪ್ ವರೆಗೆ 5 ಕೋಟಿ 18 ಲಕ್ಷ ರೂನ ರಸ್ತೆ ನೀರ್ಮಾಣ ಕಾಮಗಾರಿಗೆ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವರಾದ ಎನ್ ಎಸ್ ಬೋಸರಾಜು ಅವರು ಹಾಗೂ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಹಂಪಯ್ಯ ನಾಯಕ ಅವರು ಭೂಮಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

ಗ್ರಾಮೀಣ ಭಾಗದಲ್ಲಿ ಸಾರ್ವಜನಿಕ ಸಂಚಾರ ಜೊತೆಗೆ ರೈತರು ಬೆಳೆದ ಬೆಳೆಗಳ ಸಾಗಾಣಿಕೆಗೂ ಅನುಕೂಲವಾಗಲೆಂದು ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಎಲ್ಲರೂ ಈ ರಸ್ತೆ ಕಾಮಗಾರಿ ನಿರ್ವಹಣೆಗೆ ಸಹಕಾರ ನೀಡಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಕೆ ಅಮರೇಶಪ್ಪ, ಚಂದ್ರಶೇಖರ್ ಕುರುಡಿ, ಖಾಲಿದ್ ಗುರು, ಸತ್ಯನಾರಾಯಣ ಅಮರೇಶ್ವರ ಕ್ಯಾಂಪ್, ಗೋಪಿ ಕೃಷ್ಣ ಅಮರೇಶ್ವರ ಕ್ಯಾಂಪ, ಚಂದ್ರಶೇಖರ್ ಓತೂರು, ಮಹಾದೇವ ಕಟಾಲಿ, ಬಸವರಾಜಪ್ಪ ಗೌಡ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕಾರ್ಮಿಕರಲ್ಲಿ ಐಕ್ಯತೆ ಉತ್ತೇಜಿಸುವ ಮೇ ಡೇ

■ ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್ ಮಾಗಳ

ಶ್ರಮಜೀವಿಗಳ ಕೆಲಸವನ್ನು ಗೌರವಿಸುವ ಹಾಗೂ ಅವರ ಕಷ್ಟಗಳನ್ನು ಸ್ಮರಿಸುವ ಸಲುವಾಗಿ ಮೇ 1 ರಂದು ಜಾಗತಿಕವಾಗಿ 'ಅಂತಾರಾಷ್ಟ್ರೀಯ ಕಾರ್ಮಿಕರ ದಿನ'ವನ್ನಾಗಿ ಆಚರಿಸಲಾಗುತ್ತದೆ. ಇದನ್ನು ಮೇ ಡೇ, ಲೇಬರ್ ಡೇ ಹಾಗೂ ವರ್ಕರ್ಸ್ ಡೇ ಎಂತಲೂ ಕರೆಯಲಾಗುತ್ತದೆ. ಕಾರ್ಮಿಕ ವರ್ಗದ ಶ್ರಮ ಮತ್ತು ಸಮರ್ಪಣೆಯನ್ನು ಗುರುತಿಸುವುದು, ಕಾರ್ಮಿಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಶೋಷಣೆಯಿಂದ ರಕ್ಷಿಸುವುದು ಕಾರ್ಮಿಕ ದಿನದ ಉದ್ದೇಶ.

ಕಾರ್ಮಿಕ ದಿನದ ಇತಿಹಾಸ: ಅಮೆರಿಕದ ಕಾರ್ಮಿಕರು, ಕಠೋರ ಕಾರ್ಮಿಕ ನಿಯಮ, ಕಾರ್ಮಿಕರ ಹಕ್ಕುಗಳ ಉಲ್ಲಂಘನೆ ಮತ್ತು ಭಯಾನಕ ಕೆಲಸದ ವೇಳೆಯ ವಿರುದ್ಧ ಪ್ರತಿಭಟನೆ ಆರಂಭಿಸಿದರು. ದಿನಕ್ಕೆ 8 ಗಂಟೆ ಕೆಲಸ ನಿಗದಿಗೊಳಿಸಬೇಕೆಂಬ ಈ ಚಳವಳಿ 1860ರಿಂದ ಆರಂಭವಾಯಿತು. ಚಳವಳಿಗಾಗಿ ಅಮೆರಿಕ ಹಾಗೂ ಕೆನಡಾದಲ್ಲಿ ಹಲವು ಕಾರ್ಮಿಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ದಿನಕ್ಕೆ 10 ರಿಂದ 14 ಗಂಟೆಗಳ ಕಾಲ ಬಲವಂತವಾಗಿ ದುಡಿಸಿಕೊಳ್ಳುವುಕ್ಕೆ ವಿವಿಧ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿದವು. ಷಿಕಾಗೋ ನಗರ ಸಾವಿರಾರು ಕಾರ್ಮಿಕ ಸಂಘಟನೆಗಳ ಕೇಂದ್ರವಾಗಿ ಮಾರ್ಪಟ್ಟಿತು. 1886 ಮೇ 1 ಕಾರ್ಮಿಕ ಹೋರಾಟದ ಇತಿಹಾಸದಲ್ಲಿ ಒಂದು ಮಹತ್ವದ ಘಟ್ಟ. ಲಕ್ಷಾಂತರ ಮಂದಿ ಕಾರ್ಮಿಕರು 8 ಗಂಟೆಗಳ ಕೆಲಸದ ನಿಗದಿಗೆ ಪ್ರತಿಭಟನೆ ಪ್ರಾರಂಭಿಸಿದ್ದರು. ಈ ಹೋರಾಟದಲ್ಲಿ ಎಷ್ಟೊ ಕಾರ್ಮಿಕರು ಪ್ರಾಣ ತ್ಯಾಗ ಮಾಡಬೇಕಾಯಿತು. ಹೀಗಾಗಿ 1916 ರವರೆಗೂ ಅಮೆರಿಕ 8 ಗಂಟೆಗಳ ಕೆಲಸ ಸಮಯವನ್ನು ನಿಗದಿಗೊಳಿಸಿತು. ಕಾರ್ಮಿಕ ಹೋರಾಟಕ್ಕೆ ಸಿಕ್ಕ ಯಶಸ್ಸಿನ ನೆನಪಿಗಾಗಿ ಹಾಗೂ ಮೃತ ಕಾರ್ಮಿಕರ ಗೌರವಾರ್ಥವಾಗಿ ಮೇ 1 ರಂದು ಕಾರ್ಮಿಕರ ದಿನವಾಗಿ ಆಚರಿಸಲಾಗುತ್ತಿದೆ. ಈ ಬಲಿದಾನಗಳ ಫಲವಾಗಿ ಕೆಲಸದ ಅವಧಿ ಇಂದು ವಿಶ್ವದ ಅನೇಕ ದೇಶಗಳಲ್ಲಿ 8 ಗಂಟೆಗಳಿಗೆ ಮಿತಿಗೊಂಡಿದೆ.




**ಭಾರತದಲ್ಲಿ ಮೇ ದಿನದ ಮಹತ್ವ :** ಮೇ ದಿನವು ಸಮಾಜಕ್ಕೆ ಮತ್ತು ಸಮಾಜಕ್ಕಾಗಿ ಕಾರ್ಮಿಕರ ಕೊಡುಗೆ ಮತ್ತು ತ್ಯಾಗವನ್ನು ಆಚರಿಸುತ್ತದೆ. ಈ ದಿನದ ಮಹತ್ವವು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಕಾರ್ಮಿಕರು ಕಠಿಣ ಕಾರ್ಮಿಕ ಕಾನೂನುಗಳು, ಕಾರ್ಮಿಕರ ಹಕ್ಕುಗಳ ಉಲ್ಲಂಘನೆ, ಕಳಪೆ ಕೆಲಸದ ಪರಿಸ್ಥಿತಿಗಳು ಮತ್ತು ಭಯಾನಕ ಕೆಲಸದ ಸಮಯದ ವಿರುದ್ಧ ಪ್ರತಿಭಟಿಸಲು ಪ್ರಾರಂಭಿಸಿದ ಕಾಲದಿಂದ ಬಂದಿದೆ. ಮೇ ದಿನವು 19 ನೇ ಶತಮಾನದ ಅಂತ್ಯದಲ್ಲಿ ಕಾರ್ಮಿಕರ ಹೋರಾಟಗಳು ಮತ್ತು ನಂತರದ ಸಬಲೀಕರಣಕ್ಕೆ ಸಮಾನಾರ್ಥಕವಾಗಿದೆ. ಮೇ 1 ರಂದು ಸಮಾಜಕ್ಕಾಗಿ ಕಾರ್ಮಿಕರ ಕೊಡುಗೆ ಹಾಗೂ ತ್ಯಾಗವನ್ನು ಸ್ಮರಿಸಲಾಗುತ್ತದೆ. ಭಾರತದಲ್ಲಿ ಇದನ್ನು 'ಮೇ ದಿನ' ಎಂದು ಕರೆಯುತ್ತಾರೆ. ದೇಶದಲ್ಲಿ ಮೊದಲ ಕಾರ್ಮಿಕ ದಿನವನ್ನು ಮೇ 1 , 1923 ರಂದು ಮದ್ರಾಸಿನಲ್ಲಿ ಆಚರಿಸಲಾಯಿತು. ಇದನ್ನು ಕಾಮ್ರೇಡ್ ಸಿಂಗರವೇಲರ್ ನೇತೃತ್ವದ ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ್ ಆರಂಭಿಸಿತ್ತು. ಅಂದಿನಿಂದ ಈವರೆಗೆ ಭಾರತದಲ್ಲಿ ಕಾರ್ಮಿಕರ ದಿನವನ್ನು ಆಚರಿಸಲಾಗುತ್ತಿದೆ ಮತ್ತು ರಾಷ್ಟ್ರೀಯ ರಜೆ ಘೋಷಿಸಲಾಗಿದೆ. ಇದು 143ನೇ ವರ್ಷದ ಅಂತಾರಾಷ್ಟ್ರೀಯ ಕಾರ್ಮಿಕರ ದಿನವಾಗಿದೆ. ಭಾರತದ ವಿವಿಧ ರಾಜ್ಯಗಳಲ್ಲಿ ವಿವಿಧ ಹೆಸರುಗಳಲ್ಲಿ ಕಾರ್ಮಿಕ ದಿನವನ್ನು ಆಚರಿಸಲಾಗುತ್ತದೆ. ಉದಾಹರಣೆಗೆ ಹಿಂದಿಯಲ್ಲಿ 'ಅಂತಾರಾಷ್ಟ್ರೀಯ ಶ್ರಮಿಕ್ ದಿವಸ್', ಕಾರ್ಮಿಕ ದಿನಚರಣೆ (ಕನ್ನಡ), ಕಾರ್ಮಿಕ ದಿನೋತ್ಸವಮ್ (ತೆಲುಗು), ಕಮ್ಗರ್ ದಿವಸ್ (ಮರಾಠಿ), ಉಜೈಪಾಲರ್ ದೀನಂ (ತಮಿಳು), ತೊಝಿಲಾಲಿ ದಿನಂ (ಮಲಯಾಳಂ), ಮತ್ತು ಶ್ರೋಮಿಕ್ ದಿಬೋಶ್ (ಬಂಗಾಳಿ) ಎಂದು ಕರೆಯುತ್ತಾರೆ.

ಭಾರತದಲ್ಲಿ ಕಾರ್ಮಿಕ ಕಾನೂನುಗಳು ಆರ್ಥಿಕ ಬದಲಾವಣೆಗಳು ಮತ್ತು ಕಾರ್ಯಪಡೆಯ ವೈವಿಧ್ಯತೆಗೆ ಹೊಂದಿಕೊಳ್ಳಲು ಗಣನೀಯವಾಗಿ ವಿಕಸನಗೊಂಡಿವೆ. ಭಾರತೀಯ ಸಂವಿಧಾನವು ರಾಜ್ಯ ನೀತಿಯ ನಿರ್ದೇಶನ ತತ್ವಗಳ ಮೂಲಕ ಕಾರ್ಮಿಕ ಹಕ್ಕುಗಳನ್ನು ಬೆಂಬಲಿಸುತ್ತದೆ. ಪ್ರಮುಖ ಕಾರ್ಮಿಕ ಸುಧಾರಣೆಗಳು ಅಸ್ತಿತ್ವದಲ್ಲಿರುವ 29 ಕಾನೂನುಗಳನ್ನು ನಾಲ್ಕು ಹೊಸ ಸಂಹಿತೆಗಳಾಗಿ ಏಕೀಕರಿಸಿವೆ: ವೇತನ ಸಂಹಿತೆ, 2019, ಸಾಮಾಜಿಕ ಭದ್ರತೆಯ ಸಂಹಿತೆ, 2020, ಕೈಗಾರಿಕಾ ಸಂಬಂಧ ಸಂಹಿತೆ, 2020, ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ, 2020

ಈ ಸಂಹಿತೆಗಳು ವೇತನ, ಕೆಲಸದ ಸಮಯ, ಸುರಕ್ಷತಾ ಮಾನದಂಡಗಳು, ಕೈಗಾರಿಕಾ ಸಂಬಂಧಗಳು ಮತ್ತು ಭವಿಷ್ಯ ನಿಧಿ (PF) ಮತ್ತು ಉದ್ಯೋಗಿ ರಾಜ್ಯ ವಿಮೆ (ESI) ನಂತಹ ಪ್ರಯೋಜನಗಳನ್ನು ನಿಯಂತ್ರಿಸುತ್ತವೆ. ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಈ ಸುಧಾರಣೆಗಳನ್ನು ಅನುಷ್ಠಾನ ಗೊಳಿಸುವಲ್ಲಿನ ಪ್ರಗತಿ ಮತ್ತು ಅಂತರವನ್ನು ಪ್ರತಿಬಿಂಬಿಸಲು 2025 ರ ಅಂತರರಾಷ್ಟ್ರೀಯ ಕಾರ್ಮಿಕ ದಿನವು ಸೂಕ್ತ ಸಮಯವಾಗಿದೆ.

ಭಾರತದಲ್ಲಿ ಕಾರ್ಮಿಕ ಹಕ್ಕುಗಳು

ಭಾರತದಲ್ಲಿ ಕಾರ್ಮಿಕ ಹಕ್ಕುಗಳು ಪ್ರತಿಯೊಬ್ಬ ಕೆಲಸಗಾರನ ಘನತೆ, ಸಮಾನತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿವೆ. ಭಾರತದಲ್ಲಿ ಕಾರ್ಮಿಕ ಹಕ್ಕುಗಳನ್ನು ಸಾಂವಿಧಾನಿಕ ಲೇಖನಗಳು ಮತ್ತು ಕಾರ್ಮಿಕ ಶಾಸನದ ಮೂಲಕ ಖಾತರಿಪಡಿಸಲಾಗಿದೆ. ಪ್ರಮುಖ ಸಾಂವಿಧಾನಿಕ ನಿಬಂಧನೆಗಳು ಸೇರಿವೆ: ವಿಧಿ 23 ಮತ್ತು 24 : ಬಲವಂತದ ದುಡಿಮೆ ಮತ್ತು ಬಾಲ ಕಾರ್ಮಿಕ ಪದ್ಧತಿಯನ್ನು ನಿಷೇಧಿಸಿ., ವಿಧಿ 39 : ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಉತ್ತೇಜಿಸುತ್ತದೆ. ವಿಧಿ 41 ಮತ್ತು 43 : ಘನತೆಯನ್ನು ಖಾತ್ರಿಪಡಿಸುವ ಕೆಲಸ ಮಾಡುವ ಹಕ್ಕು ಮತ್ತು ಜೀವನ ವೇತನ.

**ಭಾರತವು ಈ ಕೆಳಗಿನ ಪ್ರಮುಖ ಐಎಲ್‌ಓ ಸಮಾವೇಶಗಳಿಗೆ ಸಹಿ ಹಾಕಿದೆ:** ಸಮಾವೇಶ ಸಂಖ್ಯೆ 138 (ಕನಿಷ್ಠ ವಯಸ್ಸಿನ ಸಮಾವೇಶ). ಸಮಾವೇಶ ಸಂಖ್ಯೆ 182 (ಬಾಲ ಕಾರ್ಮಿಕ ಪದ್ಧತಿಯ ಕೆಟ್ಟ ರೂಪಗಳು)

**ಭಾರತದಲ್ಲಿನ ಪ್ರಮುಖ ಕಾರ್ಮಿಕ ಹಕ್ಕುಗಳು:**

- ನ್ಯಾಯಯುತ ಮತ್ತು ಸಕಾಲಿಕ ವೇತನ ಪಡೆಯುವ ಹಕ್ಕು, ಸುರಕ್ಷಿತ ಮತ್ತು ಆರೋಗ್ಯಕರ ಕೆಲಸದ ಸ್ಥಳಗಳ ಹಕ್ಕು
- ಕಾರ್ಮಿಕ ಸಂಘಗಳನ್ನು ರಚಿಸುವ ಮತ್ತು ಸೇರುವ ಹಕ್ಕು
- ಸಾಮಾಜಿಕ ಭದ್ರತಾ ಸೌಲಭ್ಯಗಳ ಹಕ್ಕು
- ಕೆಲಸದ ಸ್ಥಳದಲ್ಲಿ ತಾರತಮ್ಯ ಮಾಡದಿರುವ ಹಕ್ಕು

ಆದಾಗ್ಯೂ, ಭಾರತದ ಸುಮಾರು 90% ರಷ್ಟು ಉದ್ಯೋಗಿಗಳು ಅನೌಪಚಾರಿಕ ವಲಯದಲ್ಲಿದ್ದಾರೆ, ಅಲ್ಲಿ ಈ ಹಕ್ಕುಗಳ ಪ್ರವೇಶ ಸೀಮಿತವಾಗಿದೆ. ಇ–ಶ್ರಮ ಪೋರ್ಟಲ್ , ಪಿಎಂ ಶ್ರಮ ಯೋಗಿ ಮಾನ್ ಧನ್ ಮತ್ತು ಎಂಜಿಎನ್‌ಆರ್‌ಜಿ ಜಿಎಯಂತಹ ಸರ್ಕಾರಿ ಉಪಕ್ರಮಗಳು ಅಸಂಘಟಿತ ಕಾರ್ಮಿಕರಿಗೆ ರಕ್ಷಣೆಯನ್ನು ಖಾತ್ರಿಪಡಿಸುವ ಮಹತ್ವದ ಹೆಜ್ಜೆಗಳಾಗಿವೆ.

■ **2025 ರ ಕಾರ್ಮಿಕ ದಿನದ ಮಹತ್ವ :** 2025 ರ ಕಾರ್ಮಿಕ ದಿನವು ಕಾರ್ಮಿಕರ ಹೋರಾಟಗಳು, ಸಾಧನೆಗಳು ಮತ್ತು ನಡೆಯುತ್ತಿರುವ ಸವಾಲುಗಳನ್ನು ಸಂಕೇತಿಸುತ್ತದೆ. 2025 ರ ಅಂತರರಾಷ್ಟ್ರೀಯ ಕಾರ್ಮಿಕ ದಿನದ ಮಹತ್ವವನ್ನು ಈ ಕೆಳಗಿನ ಅಂಶಗಳ ಮೂಲಕ ಅರ್ಥಮಾಡಿಕೊಳ್ಳಬಹುದು:

■ **ಕಾರ್ಮಿಕರ ಹಕ್ಕುಗಳ ಗುರುತಿಸುವಿಕೆ :** ಯೋಗ್ಯ ವೇತನ, ಉದ್ಯೋಗ ಭದ್ರತೆ ಮತ್ತು ಮಾನವೀಯ ಕೆಲಸದ ಪರಿಸ್ಥಿತಿಗಳ ಅಗತ್ಯವನ್ನು ಪುನರುಚ್ಚರಿಸುತ್ತದೆ.

■ **ಸಾಧನೆಗಳ ಆಚರಣೆ :** ಸುರಕ್ಷಿತ ಕೆಲಸದ ಸ್ಥಳಗಳು, ಕಡಿಮೆ ಕೆಲಸದ ಸಮಯ ಮತ್ತು ಸಾಮಾಜಿಕ ರಕ್ಷಣೆಗಳಂತಹ ವಿಜಯಗಳನ್ನು ಎತ್ತಿ ತೋರಿಸುತ್ತದೆ.

■ **ಜಾಗತಿಕ ಒಗ್ಗಟ್ಟು :** ನ್ಯಾಯ ಮತ್ತು ಸಮಾನತೆಗಾಗಿ ಹೋರಾಟದಲ್ಲಿ ವಿಶ್ವಾದ್ಯಂತ ಕಾರ್ಮಿಕರಲ್ಲಿ ಐಕ್ಯತೆಯನ್ನು ಉತ್ತೇಜಿಸುತ್ತದೆ.

■ **ಆಧುನಿಕ ಸವಾಲುಗಳ ಅರಿವು :** ಯಾಂತ್ರೀಕೃತಗೊಳಿಸುವಿಕೆ, ಗಿಗ್ ಆರ್ಥಿಕತೆ, ದೂರಸ್ಥ ಕೆಲಸ ಮತ್ತು ಹವಾಮಾನ ಸಂಬಂಧಿತ ಕಾರ್ಮಿಕ ರೂಪಾಂತರ ಗಳಂತಹ ವಿಷಯಗಳ ಮೇಲೆ ಕೇಂದ್ರೀಕರಿಸುತ್ತದೆ.

■ **ಸಾಮಾಜಿಕ ನ್ಯಾಯಕ್ಕಾಗಿ ವಕಾಲತ್ತು :** ಎಲ್ಲರನ್ನೂ ಒಳಗೊಂಡ ಆರ್ಥಿಕ ಬೆಳವಣಿಗೆ, ಯೋಗ್ಯ ಕೆಲಸದ ಅವಕಾಶಗಳು ಮತ್ತು ನ್ಯಾಯಯುತ ಕಾರ್ಮಿಕ ಪದ್ಧತಿಗಳಿಗೆ ಒತ್ತು ನೀಡುತ್ತದೆ.






## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 01–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.25 ಅಡಿ |
| ಒಳ ಹರಿವು | 372 ಕ್ಯುಸೆಕ್ |
| ಹೊರ ಹರಿವು | 390 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.846 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1578.07 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 266 ಕ್ಯುಸೆಕ್ |
| ಸಾಮರ್ಥ್ಯ | 3.601 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

02–05–2025 – ಶುಕ್ರವಾರ

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆರಿದ್ರ |
| ಯೋಗ | : ಧೃತಿ |
| ಕರಣ | : ಬಾಳವ |
| ಸೂರ್ಯೋದಯ | : 05:54:18 |
| ಸೂರ್ಯಾಸ್ತ | : 18:53:47 |
| ರಾಹು ಕಾಲ | : 10:47–12:24 |
| ಯಮಘಂಡ ಕಾಲ | : 15:39–17:16 |
| ಗುಳಿಕ ಕಾಲ | : 07:32–09:09 |

# ಬಸವಣ್ಣನವರ ಆದರ್ಶ-ತತ್ವಗಳು ನಮಗೆಲ್ಲಾ ದಾರಿ-ದೀಪ:ಭರತ್‌ರೆಡ್ಡಿ

### ವಚನ ಪ್ರಸಾರಕ್ಕಾಗಿ ಬಳ್ಳಾರಿಯಲ್ಲಿ ರಾಜ್ಯ ಮಟ್ಟದ ಪ್ರವಚನ ಕಾರ್ಯಕ್ರಮ ಏರ್ಪಾಡು



■ **ಹಂಪಿ ಟೈಮ್ಸ್ ಬಳ್ಳಾರಿ**
ಸಾಂಸ್ಕೃತಿಕ ನಾಯಕ, ಜಗಜ್ಯೋತಿ ಬಸವಣ್ಣನವರ ಆದರ್ಶ–ತತ್ವಗಳು ಇಂದು ನಮಗೆಲ್ಲಾ ದಾರಿ–ದೀಪವಾಗಿವೆ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಬುಧವಾರ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಏರ್ಪಡಿಸಿದ್ದ 892ನೇ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಾದಿ ಶರಣರೆಲ್ಲರ ವಚನ ತತ್ವ ಪ್ರಸಾರಕ್ಕಾಗಿ ಬಸವ ಸಂಗಮ ಎಂಬ ಹೆಸರಿನಡಿ ಕಲ್ಯಾಣ ಕರ್ನಾಟಕ ಭಾಗದ ಎಲ್ಲ ಪ್ರಮುಖ ಸ್ವಾಮೀಜಿಗಳಿಂದ, ಪ್ರವಚನಕಾರರಿಂದ ರಾಜ್ಯ ಮಟ್ಟದ ಪ್ರವಚನ ಕಾರ್ಯಕ್ರಮವನ್ನು ಬಳ್ಳಾರಿ ಯಲ್ಲಿ ಏರ್ಪಡಿಸಲಾಗುವುದು ಎಂದು ತಿಳಿಸಿದರು.

ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಿದ್ದೇವೆ. ನಗರದಲ್ಲಿ ಅಶ್ವಾರೂಢ ಬಸವಣ್ಣನವರಪುತ್ಥಳಿ ಹಾಗೂ ವೃತ್ತ ನಿರ್ಮಾಣದ ಕಾಮಗಾರಿಗೆ ಚಾಲನೆ ನೀಡಲಾಗಿದೆ. ವಚನ ಹೇಳುವ ಮೂಲಕ ತತ್ವಾದರ್ಶದ ಬದುಕಿಗೂ ಸಿದ್ಧ, ಸಮಯ ಬಂದರೆ ಆಶ್ವಾರೂಢ ಬಸವಣ್ಣನ ಹಾಗೆ ಶರಣರ ರಕ್ಷಣೆಗೆ ಶಸ್ತ್ರ ಹಿಡಿಯಲು ಕೂಡ ಈ ಸಮಾಜ ಸಿದ್ದ ಎಂದು ಅಭಿಮತ ವ್ಯಕ್ತಪಡಿಸಿದರು.

ವೀರಶೈವ ಲಿಂಗಾಯತ ಮಠಗಳಿಂದಾಗಿ ಇಂದು ರಾಜ್ಯದ ಲಕ್ಷಾಂತರ ಜನ ಅಕ್ಷರಸ್ಥರಾಗಿದ್ದಾರೆ. ರಾಜ್ಯದ ಮಠಗಳ ಸ್ವಾಮೀಜಿಗಳು ಭಿಕ್ಷೆ ಬೇಡಿ ಎಲ್ಲ ಸಮುದಾಯದ ಜನರಿಗೆ ಶಿಕ್ಷಣ ನೀಡಿದ್ದಾರೆ. ಅದರಿಂದಾಗಿ ನಾವೆಲ್ಲ ಇಂದು ಬದುಕು ಕಟ್ಟಿಕೊಂಡಿದ್ದೇವೆ ಎಂದರು.

ಕೊಟ್ಟೂರು ಶ್ರೀ ಬಸವಲಿಂಗಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ ಬಸವಣ್ಣ ಎಲ್ಲರಿಗೂ ಸೇರಿದ ವ್ಯಕ್ತಿ. ಎಲ್ಲಾ ಕೆಳ ವರ್ಗದ ಜನರನ್ನು ಮೇಲೆತ್ತಿದ ಮಹಾ ಮಹಿಮರು ಎಂದು ಹೇಳಿದರು.

ಬಳ್ಳಾರಿಯ ಬಸವತತ್ವ ಚಿಂತಕರಾದ ಡಾ. ರವಿಶಂಕರ್ ಅವರು ಬಸವೇಶ್ವರ ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡಿದರು. ಬಳ್ಳಾರಿಯ ಕೆ.ದೊಡ್ಡಬಸವ ಗವಾಯಿ ತಂಡದಿಂದ ವಚನ ಸಂಗೀತ ಪ್ರಸ್ತುತಪಡಿಸಿದರು. ಕಾರ್ಯಕ್ರಮದಲ್ಲಿ ವಿಶೇಷ ಸಾಧನೆಗೈದ ಸಮುದಾಯದ ಗಣ್ಯರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ರಾಷ್ಟ್ರೀಯ ಬಸವದಳದ ಗೌರವಾಧ್ಯಕ್ಷ ಸಿರಿಗೇರಿ ಪನ್ನರಾಜ್ ಸೇರಿದಂತೆ ಮಹಾನಗರ ಪಾಲಿಕೆಯ ಸದಸ್ಯರು, ಸಮುದಾಯದ ಮುಖಂಡರು ಹಾಗೂ ಅನೇಕರು ಉಪಸ್ಥಿತರಿದ್ದರು.

# ಜನಸಂಖ್ಯೆಗನುಗುಣವಾಗಿ ಮೀಸಲಾತಿ ಕಲ್ಪಿಸಿ : ಸಿಎಂ

**ಮೊದಲ ಪುಟದಿಂದ**
ಪಡೆಯಲು ದಿನಾಂಕ ನಿಗದಿ ಮಾಡಿದಾಗ ಅವರನ್ನು ಅಮಾನತು ಮಾಡುವುದಾಗಿ ಹೆದರಿಸಿ ವರದಿಯನ್ನು ಪಡೆಯಲಿಲ್ಲ ಎಂದರು.

ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಲಾಗಿದ್ದು, ಸಚಿವರು ಅಂತಿಮ ಅಭಿಪ್ರಾಯ ಕೊಟ್ಟನಂತರ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಏರಿಕೆಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಾಗಿ ತಿಳಿಸಿದರು. ಮೀಸಲಾತಿ ಏರಿಕೆಯಾಗಬೇಕಾದರೆ ಸಂವಿಧಾನಕ್ಕೆ ಕೇಂದ್ರ ಸರ್ಕಾರ ತಿದ್ದುಪಡಿ ಮಾಡಬೇಕು. ರಾಜ್ಯ ಸರ್ಕಾರ ಕೇಂದ್ರಕ್ಕೆ ಎಷ್ಟು ಪ್ರಮಾಣದಲ್ಲಿ ಏರಿಕೆ ಮಾಡಬೇಕೆಂದು ತಿಳಿಸಬಹುದು. ಆಗ ಸಂವಿಧಾನ ತಿದ್ದುಪಡಿ ಮಾಡಿ ಏರಿಕೆ ಮಾಡಬಹುದು ಎಂದರು.

ಬಡವರು, ಜನಸಂಖ್ಯೆ, ಶೈಕ್ಷಣಿಕವಾಗಿ, ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ಹಿಂದುಳಿದವರಿಗೆ ಮೀಸಲಾತಿ ನಿಗದಿ ಮಾಡಬೇಕೆಂದು ಸಂವಿಧಾನದ ವಿಧಿ ಕಲಂ 14,15,16 ಹೇಳುತ್ತದೆ. ಹಿಂದೆ ಇದ್ದ ಶೇ 50% ರ ಗರಿಷ್ಠ ಪರಿಮಿತಿಯನ್ನು ಹೆಚ್ಚು ಮಾಡಲು ಒತ್ತಾಯ

ರಾಜ್ಯ ಸರ್ಕಾರದ ಸಮೀಕ್ಷೆ ಅವೈಜ್ಞಾನಿಕ ಎಂದು ಕೇಂದ್ರ ಸಚಿವರಾದ ಅಶ್ವಿನ್ ವೈಷ್ಣವ್ ಹಾಗು ಧರ್ಮೇಂದ್ರ ಪ್ರಧಾನ್ ಅವರು ಹೇಳಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು ಅವರದ್ದೇ ಪಕ್ಷದ ಬೆಂಬಲಿಗರು ಬಿಹಾರದಲ್ಲಿ ನಡೆಸಿರುವ ಸಮೀಕ್ಷೆ ಬಗ್ಗೆ ಅವರು ಏನು ಹೇಳುತ್ತಾರೆ ಎಂದು ಪ್ರಶ್ನಿಸಿದರು. ರಾಜ್ಯ ಸರ್ಕಾರಗಳಿಗೆ ಜಾತಿ ಅಥವಾ ಜನಗಣತಿ ಮಾಡಲು ಹಕ್ಕಿಲ್ಲ ಎಂದು ಸಂವಿಧಾನದಲ್ಲಿ ಹೇಳಿದೆಯೇ ಎಂದು ಪ್ರಶ್ನಿಸಿದರು. ರಾಜ್ಯ ಸರ್ಕಾರದಲ್ಲಿ ದಲಿತರೂ ಸೇರಿ 51% ಮೀಸಲಾತಿ ಇದೆ. ಹಿಂದೆ ಇದ್ದ ಶೇ 50% ರ ಗರಿಷ್ಠ ಪರಿಮಿತಿಯನ್ನು ಹೆಚ್ಚು ಮಾಡಬೇಕೆಂದಿದೆ ಎಂದರು.

ನಮ್ಮದು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯಾಗಿದ್ದು ಕೇಂದ್ರವೂ ಅದನ್ನೇ ಮಾಡಲಿ ಎಂದು ಒತ್ತಾಯಿಸುತ್ತೇವೆ ಎಂದರು.

**.ಶೇ 93% ಜನಸಂಖ್ಯೆ ಸಮೀಕ್ಷೆಗೆ ಒಳಪಟ್ಟಿದ್ದಾರೆ**

ರಾಜ್ಯ ಸರ್ಕಾರ ನಡೆಸಿದ ಸಮೀಕ್ಷೆಯಲ್ಲಿ 5.90 ಕೋಟಿ ಜನರನ್ನು ಒಳಪಡಿಸಲಾಗಿದೆ. ಶೇ 93% ಜನಸಂಖ್ಯೆ ಸಮೀಕ್ಷೆಗೆ ಒಳಪಟ್ಟಿದ್ದು, ಶೆ 100% ಸಮೀಕ್ಷೆ ನಡೆಸಲು ಸಾಧ್ಯವಿಲ್ಲ ಎಂದರು.

ಮುಂದಿನ ಸಚಿವ ಸಂಪುಟದಲ್ಲಿ ಅಭಿಪ್ರಾಯ ಪಡೆದು ಚರ್ಚೆ ಮಾಡಿ, ನಮ್ಮ ತೀರ್ಮಾನವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು. ಬಜೆಟ್ ರೂಪಿಸುವಾಗ ಇದನ್ನು ಆಧಾರವಾಗಿಟ್ಟುಕೊಂಡು ಮಾಡಲಾಗುವುದು ಎಂದರು.

ಮೇ 9 ರಂದು ಬಹುತೇಕ ಸಚಿವ ಸಂಪುಟ ಸಭೆಯನ್ನು ನಿಗದಿ ಮಾಡಲಾಗುವುದು. ಸಮಾನತೆ ತರಲು ಎಲ್ಲರಿಗೂ ರಾಜಕೀಯ, ಶೈಕ್ಷಣಿಕ, ಆರ್ಥಿಕವಾಗಿ ಸಾಮಾಜಿಕವಾಗಿ ಪಾಲಿರಬೇಕು. ಬಿಜೆಪಿಯವರು ನಾಲ್ಕು ವರ್ಷ ಅಧಿಕಾರದಲ್ಲಿದ್ದರೂ ಸಮೀಕ್ಷೆಯ ವರದಿನ್ನು ಪಡೆಯಲಿಲ್ಲ ಎಂದರು. ಸಾಮಾಜಿಕ ನ್ಯಾಯವನ್ನು ಎಲ್ಲರಿಗೂ ದೊರಕಿಸಲು, ಸಮಾನತೆ ತರಲು ರಾಜಕೀಯ, ಶೈಕ್ಷಣಿಕ, ಆರ್ಥಿಕವಾಗಿ ಸಾಮಾಜಿಕವಾಗಿ ಪಾಲಿರಬೇಕು ಎಂಬ ಉದ್ದೇಶದಿಂದ ಸಮೀಕ್ಷೆ ನಡೆಸಲಾಯಿತು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

**ವರದಿಗೆ ದತ್ತಾಂಶ ಲಭ್ಯ**

1992 ರಲ್ಲಿ ಇಂದಿರಾ ಸಾಹಾನಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಮಂಡಲ್ ಸಮಿತಿ ವರದಿಗೆ ದತ್ತಾಂಶ ಏನು ಎಂದು ಸ್ಪಷ್ಟವಾಗಿ ಪ್ರಶ್ನಿಸಿತ್ತು. ಈಗ ಕರ್ನಾಟಕ, ಬಿಹಾರ, ತೆಲಂಗಾಣದಲ್ಲಿ ಸಮೀಕ್ಷೆ ಮಾಡಲಾಗಿದೆ ಎಂದು ತಿಳಿಸಿದರು.

# ಸರ್ಕಾರ ಕಾರ್ಮಿಕರಿಗೆ ರಕ್ಷಣೆ, ಸೌಲಭ್ಯಗಳನ್ನ ಒದಗಿಸಲಿ

### ಭಾರತೀಯ ಜೀವ ವಿಮಾನ ನಿಗಮದ ಪ್ರತಿನಿಧಿಗಳ ಸಂಘದ ಅಧ್ಯಕ್ಷ ಸೈಯದ್ ಬಶೀರ್ ಅಹ್ಮದ್ ಆಗ್ರಹ

■ **ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಭಾರತೀಯ ಜೀವ ವಿಮಾ ನಿಗಮದ ಆವರಣದಲ್ಲಿ ಗುರುವಾರ 139ನೇ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಯಿತು.

ಭಾರತೀಯ ಜೀವ ವಿಮಾನ ನಿಗಮದ ಪ್ರತಿನಿಧಿಗಳ ಸಂಘದ ಅಧ್ಯಕ್ಷ ಸೈಯದ್ ಬಶೀರ್ ಅಹ್ಮದ್ ಮಾತನಾಡಿ, ಇಂದು ಕಾರ್ಮಿಕರಿಗೆ ಯಾವುದೇ ರೀತಿಯ ಸವಲತ್ತುಗಳನ್ನು ಸರ್ಕಾರಗಳು ನೀಡುತ್ತಿಲ್ಲ, ತುಂಬಾ ನಿಕೃಷ್ಟವಾಗಿ ಕಾಣಲಾಗುತ್ತಿದೆ. ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಕಾರ್ಮಿಕರು ಏಕತಾ ಮನೋಭಾವದಿಂದ ಹೋರಾಡಬೇಕು. ಕಡಿಮೆ ವೇತನ ಸುರಕ್ಷತೆಯ ಕೊರತೆ ಶ್ರಮದ ಮೌಲ್ಯ ಬದಲಾಗಬೇಕಿದೆ. ಕಾರ್ಮಿಕ ದಿನಾಚರಣೆ ಕೇವಲ ಒಂದು ದಿನ ಆಚರಿಸುವ ದಿನವಲ್ಲ ಇದು ಪ್ರತಿದಿನ ಶ್ರಮಿಕರಿಗೆ ನೀಡುವ ಗೌರವ ಮತ್ತು ಪ್ರೇರಣೆಯ ದಿನ ಎಂದರು.

ವಿಮಾ ನೌಕರರ ಸಂಘದ ಜೆ.ಪ್ರಕಾಶ, ಪಿ ಮಂಜುನಾಥ್, ಎಲ್. ಮಂಜುನಾಥ, ಮಾತನಾಡಿ, ಕಾರ್ಮಿಕರಿಗೆ ವೈದ್ಯಕೀಯ ರಕ್ಷಣೆ ಅಪಘಾತ ವಿಮೆ, ನಿವೃತ್ತಿ ಪಿಂಚಣಿ ಮುಂತಾದ ಸಾಮಾಜಿಕ ಭದ್ರತಾ ವ್ಯವಸ್ಥೆಗಳನ್ನು ಸರಕಾರಗಳು ಕಲ್ಪಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ವಿಜಯಕುಮಾರ್, ರಾಮಾಂಜನೇಯಲು, ಪ್ರಮೋದ್, ಖಾಸಿಂ ಸಾಬ್ ನೌಶಾದಲಿ, ಪಾಂಡುರಂಗ ರಾವ್, ಪಂಪಾಪತಿ , ಮೆಹಬೂಬ್, ಶಿಲ್ಪಾ ರಾಣಿ, ಭಾಸ್ಕರ್ ಬಳಗಾನೂರ, ಶ್ರೀಧರ್, ಶ್ರೀನಿವಾಸ್ ಇತರರು ಇದ್ದರು.

# ಬಸವಣ್ಣರಿಂದ ವಿಶ್ವದಲ್ಲೆ ಪ್ರಥಮ ಸಂಸತ್ ರಚನೆ

### ಸಂಸದ ಕೆ.ರಾಜಶೇಖರ ಬಸವರಾಜ ಹಿಟ್ನಾಳ್ ಹೇಳಿಕೆ । ಬಸವ ಜಯಂತ್ರಯೋತ್ಸವ



■ **ಹಂಪಿ ಟೈಮ್ಸ್ ಕೊಪ್ಪಳ**
ಜಗತ್ತಿಗೆ ಸಂಸತ್ ಪರಿಕಲ್ಪನೆಯನ್ನು ನೀಡಿದವರು ಜಗಜ್ಯೋತಿ ಬಸವಣ್ಣನವರು ಎಂದು ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಹೇಳಿದರು.

ಬುಧವಾರ ಕೊಪ್ಪಳ ನಗರದ ಶ್ರೀ ಗವಿಮಠದ ಆವರಣದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಬಸವ ಜಯಂತ್ಯೋತ್ಸವ ಉದ್ಘಾಟಿಸಿ ಮಾತನಾಡಿದರು. ಬಸವಣ್ಣನವರು 12ನೇ ಶತಮಾನದಲ್ಲಿ ವಿಶ್ವದಲ್ಲೇ ಮೊದಲನೆ ಸಂಸತ್ತನ್ನು ರಚನೆ ಮಾಡಿ, ವರ್ಣ ಭೇದ, ಜಾತಿ ಭೇದವನ್ನು ಹೋಗಲಾಡಿಸಲು ಶ್ರಮಿಸಿದವರು. ಸಮಾನತೆಯ ಸಮಾಜವನ್ನು ಕೊಡಬೇಕೆಂಬ ಉದ್ದೇಶದಿಂದ ಚಿಂತನೆಗಳನ್ನಷ್ಟೇ ಮಾಡದೆ, ಚಳುವಳಿಗಳ ಮೂಲಕ ಕಲ್ಯಾಣ ಕ್ರಾಂತಿಗೆ ನಾಂದಿ ಹಾಡಿದರು.

ಜಗತ್ತಿನಲ್ಲಿ ಬಹಳಷ್ಟು ರಾಷ್ಟ್ರಗಳಿದ್ದು, ಎಲ್ಲಾ ದೇಶಗಳು ಸಂಸತ್ತನ್ನು ಹೊಂದಿವೆ, ಇಲ್ಲಿ ಸಮಸ್ಯೆಗಳ ಕುರಿತು ಚರ್ಚೆ ಮಾಡಲಾಗುತ್ತದೆ. ಸಮಾಜದಲ್ಲಿ ಸಮಾನತೆ ಕೊಡುವುದರ ಬಗ್ಗೆಯೂ ಚರ್ಚೆ ಮಾಡಲಾಗುತ್ತದೆ. ಇಂದು ಎಲ್ಲರಿಗೂ ಸಮಾನ ಅವಕಾಶಗಳು ಸಿಗುತ್ತಿವೆ ಅಂದರೆ, 12ನೇ ಶತಮಾನದಲ್ಲಿ ಬಸವಣ್ಣನವರು ವಿಶ್ವದ ಮೊದಲ ಸಂಸತ್ತನ್ನು ಸ್ಥಾಪನೆ ಮಾಡಿರುವುದೇ ಮುಖ್ಯ ಕಾರಣ. ಇದಕ್ಕಾಗಿ ಅವರನ್ನು ಜಗಜ್ಯೋತಿ ಬಸವಣ್ಣ ಎಂದು ಕರೆಯಲಾಗುತ್ತಿದೆ ಎಂದರು.

ಬಸವಣ್ಣನವರು ಸಮಾನತೆಯ ಜತೆಗೆ ಎಲ್ಲರೂ ಶ್ರಮ ಪಡಬೇಕು, ಶ್ರಮದ ಫಲವನ್ನ ಸಮಾನವಾಗಿ ಹಂಚಿಕೊಳ್ಳಬೇಕು ಎನ್ನುವುದನ್ನು ಸಹ ಸಮಾಜಕ್ಕೆ ತಿಳಿಸಿ ಕೊಟ್ಟಿದ್ದಾರೆ. 'ಕಾಯಕವೇ ಕೈಲಾಸ' ಎಂಬಂತೆಯೇ ಎಲ್ಲಾ ಧರ್ಮಗಳಲ್ಲಿ ದುಡಿಯುವ ಬಗ್ಗೆ ತಿಳಿಸಲಾಗುತ್ತದೆ. ಕೆಲಸದಲ್ಲಿ ಶ್ರದ್ಧೆಯಿರಬೇಕು, ಅದರಲ್ಲೆ ಕೈಲಾಸ ಕಾಣಬೇಕು ಅಂತ ವಿವಿಧ ರೀತಿಯಲ್ಲಿ ಹೇಳಲಾಗುತ್ತದೆ. ಜಗತ್ತಿನ ಬಹಳಷ್ಟು ರಾಷ್ಟ್ರಗಳಲ್ಲಿ ಶಾಂತಿಯುತ ದೇಶ, ಸಂಸ್ಕೃತಿಯಲ್ಲಿ ಜಗತ್ತಿಗೆ ಮೊದಲನೆಯ ಸ್ಥಾನದಲ್ಲಿ ಬರುವಂತ ರಾಷ್ಟ್ರ ಅಂದರೆ ಭಾರತ. ನಮ್ಮ ದೇಶವು ಸಂಸ್ಕೃತಿಯಲ್ಲಿ ಅಷ್ಟೊಂದು ಶ್ರೇಷ್ಠವಾಗಿದೆ. ಇಂತಹ ಸಂಸ್ಕೃತಿಗೆ ಭೂನಾದಿ ಹಾಕಿದವರು ಬಸವಣ್ಣನವರು. ಇದಕ್ಕಾಗಿ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಕರೆಯುತ್ತೇವೆ. ನಾವೆಲ್ಲರೂ ಬಸವಣ್ಣನವರ ಆದರ್ಶಗಳನ್ನು ಪಾಲನೆ ಮಾಡುವುದರ ಜತೆಗೆ ಸಮ ಸಮಾಜವನ್ನು ನಿರ್ಮಾಣ ಮಾಡುವಂತಹ ಕೆಲಸ ಮಾಡೋಣ ಎಂದು ಹೇಳಿದರು.

ಬೆಂಗಳೂರು ಬಸವ ಸಮಿತಿ ಅಧ್ಯಕ್ಷರಾದ ಅರವಿಂದ ಜತ್ತಿ ಉಪನ್ಯಾಸ ನೀಡಿ, ಬಸವಣ್ಣನವರ ಬದುಕು, ವಚನಗಳನ್ನು ಬರಿ ಮಾತುಗಳಲ್ಲಿ ವಿಜೃಂಭಿಸದೇ ಅಕ್ಷರಶಃ ಅವುಗಳನ್ನು ನಮ್ಮ ನಡೆನುಡಿಯೊಳಗೆ ಒಂದಾಗಿಸಿಕೊಂಡು ಬದುಕನ್ನು ಸಾಗಿಸಿದರೆ, ಹನ್ನೆರಡನೇ ಶತಮಾನ ದಲ್ಲಿ ಬಸವಣ್ಣನವರು ಕಂಡ ಸಮಾನತೆಯ ಸಮಾಜವನ್ನು ನಾವೆಲ್ಲರೂ ನಿರ್ಮಿಸಬಹುದು. ಬಸವ ಜಯಂತಿಯು ರಾಷ್ಟ್ರ ಮಟ್ಟದ ಕಾರ್ಯಕ್ರಮವಾಗಬೇಕು. ಈ ಬಗ್ಗೆ ಕರ್ನಾಟಕ ರಾಜ್ಯದ ಎಲ್ಲಾ ಸಂಸದರು ಲೋಕಸಭೆಯಲ್ಲಿ ಧ್ವನಿ ಎತ್ತಬೇಕು ಎಂದರು.

ಅಥಣಿ ತಾಲ್ಲೂಕಿನ ಜನವಾಡದ ಅಲ್ಲಮಪ್ರಭು ಮಠದ ಪೂಜ್ಯಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಸಾನ್ನಿಧ್ಯವಹಿಸಿದರು. ಧಾರವಾಡದ ಡಾ. ವೀಣಾ ಯಲಿಗಾರ ಮಾತನಾಡಿದರು.

**ಬಸವ ಕಾರುಣ್ಯ ಪ್ರಶಸ್ತಿ ಪ್ರದಾನ:**
ಕಾಯಕ ಜೀವಿಗಳಾದ ಜಯಶ್ರೀ ಗುಳಗಣ್ಣವರ್ ಹಾಗೂ ಬಸವನಗೌಡ ಅವರಿಗೆ 'ಬಸವ ಕಾರುಣ್ಯ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಜನಪ್ರತಿನಿಧಿಗಳು ಇತರರು ಉಪಸ್ಥಿತರಿದ್ದರು.

